ಅಪರಂಜಿ


ಸಂಪುಟ [illegible]
ನವಂಬರ್ ೧೯೮೮
ಸಂಚಿಕೆ [illegible]

ತಿಳಿನಗೆಯ ಕಾರಂಜಿ



- ಆನಂದ್
- ಭುವನೇಶ್ವರಿ ಹೆಗಡೆ
- ಆಮಲಕ
- ಶಿವು
- ಲಾಫರ್
- ಎಂ. ವಿ. ಸೀತಾರಾಮಯ್ಯ
- ಶಾಂತಾ ರಘು
- ಆನಂದಾಗರ

ಬಿಡಿಪ್ರತಿ : ಕೇವಲ ಒಂದೂವರೆ ರೂಪಾಯಿ



(ತಿಳಿನಗೆಯ ಕಾರಂಜಿ)

ಸಂಪುಟ ೬ | ನವಂಬರ್ ೧೯೮೮ | ಸಂಚಿಕೆ ೨

ಚಂದಾ ವಿವರ :-

ಬಿಡಿ ಪ್ರತಿ :
ಒಂದೂವರೆ ರೂಪಾಯಿ

ವಾರ್ಷಿಕ ಚಂದಾ : 15 ರೂ.
ಆಜೀವ ಚಂದಾ : 150 ರೂ.
ಪೋಷಕರು : 500 ರೂ.

ಗೌರವ ಸಲಹೆಗಾರರು :
ಶ್ರೀ ಅ. ರಾ. ಸೇ.
ಶ್ರೀ ಶೇಷಗಿರಿ

ವಿಳಾಸ :
ಅಪರಂಜಿ ಕಾರ್ಯಾಲಯ
119 [ಹಳೆಯ 36]
6ನೆ ಮುಖ್ಯ ರಸ್ತೆ
ಮಲ್ಲೇಶ್ವರಂ
ಬೆಂಗಳೂರು 560003

ಸಂಪಾದಕ :
ಶಿವಕುಮಾರ್

ಮೊನ್ನೆ ನಮ್ಮೂರಿಗೆ ಬಂದಿದ್ದ ಅಮೆರಿಕನ್ ಮಿತ್ರನೊಬ್ಬ, ರಾತ್ರೆ ಇಂಗ್ಲೀಷ್ ಸುದ್ದಿಯನ್ನು ಟಿ. ವಿ. ಯಲ್ಲಿ ನೋಡಿದ ನಂತರ

"ಹಾರ್ಡ್‌ಕೋರ್ ಟೆರರಿಸ್ಟ್ ಸಿಕ್ಕಬಿದ್ದರು ಅಂತ ಹೇಳಿದರಲ್ಲ, ಸ್ಟಾಫ್‌ಕೋರ್ ಟೆರರಿಸ್ಟ್ ಅಂದ್ರೆ ಹೇಗಿರ್ತಾರೆ ?" ಅಂದ ಕೇಳಿದನಂತೆ.

ಈ ಸಂಚಿಕೆಯಲ್ಲಿ......

ವ್ಯಂಗ್ಯ ಚಿತ್ರಗಳು : ಅಶ್ವಥ್

ಮುದ್ರಣ : ಇಂಪ್ರೆಷನ್ಸ್ ಪ್ರಿಂಟರ್ಸ್, ಮಲ್ಲೇಶ್ವರಂ,
ಬೆಂಗಳೂರು-3. ದೂರವಾಣಿ : 363444

ಅಪರಂಜಿ

(ತಿಳಿನಗೆಯ ಕಾರಂಜಿ)

ಸಂಪುಟ ೬ ನವೆಂಬರ್ ೧೯೮೮ ಸಂಚಿಕೆ ೨

ಹೀಗೆಂದು ಅರಿತುಕೊಳ್ಳುವವನು ಅಭಯವಾದ ಬ್ರಹ್ಮವೇ ಆಗುತ್ತಾನೆ.

—ಬೃಹದಾರಣ್ಯಕ

ಬ್ರಹ್ಮವು ಹುಟ್ಟು ಸಾವುಗಳಿಲ್ಲದುದೂ, ಮಹಾಂತವೂ, ಎಲ್ಲ ಪ್ರಾಣಿಗಳಲ್ಲೂ ಅನ್ನವನ್ನು ತಿನ್ನುವುದೂ, ಎಲ್ಲರ ಕರ್ಮಗಳಿಗನುಸಾರವಾಗಿ ಫಲವನ್ನು ಕೊಡುವುದೂ ಭಯವಿಲ್ಲದ್ದೂ ಆಗಿದೆ ಎಂದರಿತವನು ಅಭಯವಾದ ಬ್ರಹ್ಮವಾಗುತ್ತಾನೆ ಎಂದು ಯಾಜ್ಞವಲ್ಕ್ಯನು, ಜನಕನಿಗೆ ಹೇಳಿದನು.

ಈಗಲೂ, ಇಲ್ಲಿಯೂ ಅಷ್ಟೇ. ರಾಜಕೀಯವಿರುವುದು ನಮಗಾಗಿ ಅಲ್ಲ, ನಾವು ಅದಕ್ಕೆ ಉಪಕರಣಗಳು; ಇಂದಿನ ಅರಿತವರು, ಹೊತ್ತು ಹೊತ್ತಿಗೆ ಬಾಗುವ ತತ್ವಗಳನ್ನು ಅರಿತವರು. ನುಡಿದಂತೆ ನಡೆಯಬೇಕೆಂಬ ಗೊಡವೆಯವರಲ್ಲ. ಯಾರನ್ನು ಬೇಕಿದ್ದರೂ, ಹೇಗೆ ಬೇಕಾದರೂ ಜಾಕ್ ಕೊಟ್ಟು ಎತ್ತುತ್ತಾರೆ, ಇಳಿಸುತ್ತಾರೆ. ಅಧಿಕಾರವೆಂಬುದು, ಹಣವೆಂಬುದು ಚಿನ್ನದ ಜಿಂಕೆಯಿದ್ದ ಹಾಗೆ. ಅದೂ ಸತ್ತು ಹೋಗುತ್ತದೆ, ಇದ್ದದ್ದನ್ನು ಹಾರಿಸಿಕೊಂಡು ಹೋಗುತ್ತದೆ. ಇಳಿದು ಮುಳುಗಿದ ಮೇಲೆ ಚಳಿಯೇನು ಗಾಳಿಯೇನು ? ಊಸರವಳ್ಳಿಯ ಬಣ್ಣದಂತೆ ಸುತ್ತ ಕಾಣುವುದೆಲ್ಲಾ ಕ್ಷಣಕೊಂದು ತರಹದ ಬಣ್ಣಕ್ಕೆ ತಿರುಗುತ್ತದೆ. ಬಂದ ಪ್ರಾರಬ್ಧವನ್ನನುಭವಿಸುವುದು ತಪ್ಪಿದ್ದಲ್ಲ. ಬೆದರಿದರೆ ಭಯ ಹೋಗುವುದಿಲ್ಲ ಎಂದರಿತು ತನ್ನನ್ನು ತಾನು ಅರಿತುಕೊಂಡವನು ಅಭಯವಾದ ಬ್ರಹ್ಮವಾಗುತ್ತಾನೆ.

ಹಲವು ಆಶೆಗಳ ಬೆನ್ನು ಹತ್ತುವವನು ಏನೇನೋ ಆಗಿಬಿಡುತ್ತಾನೆ.

ಅಪರಂಜಿ ಕಿಡಿ

—ಆನಂದ್

ಸೋಲ್‌ನಲ್ಲಿ ಭಾರತದ ಮಹಿಳಾ ರಿಲೇ ಪಂಗಡದವರು ಒಬ್ಬೊಬ್ಬರು ಒಂದೊಂದು ದಿಕ್ಕಿನಲ್ಲಿ ಓಡಿದರಂತೆ ಎಂಬುದು ಶುದ್ಧ ಕುಹಕ !

* * * *

ಸೋಲ್‌ನಲ್ಲಿ ಭಾರತಕ್ಕೆ ಯಾವ ಪದಕವೂ ಸಿಕ್ಕದಿದ್ದದ್ದು ಆಶ್ಚರ್ಯವೇನಲ್ಲ ಅಲ್ಲವೆ ?

* * * *

ಪೆಪ್ಸಿ ಕೋಲ ; ಕೇಂದ್ರದ ನಿಲುವಿಗೆ ಪ್ರತಿಭಟನೆ

—ಸುದ್ದಿ

ಓಹೋ, ಇದು ಕೋಲಾಹಲ ಆಗುವಂತಿದೆ !

* * * *

ನಗರದಲ್ಲಿ ಆಟೋ ಮುಷ್ಕರ.!

—ಸುದ್ದಿ

'ಮಧ್ಯಾಹ್ನ ಚೆನ್ನಾಗಿ ನಿದ್ದೆ ಬಂತು ಅಂದ ನಮ್ಮ ಸೋಮಾರಿ ಸೋಮು !

* * * *

ಹಂಪೆಗೆ ಪ್ರಧಾನಿ ಭೇಟಿ

—ಪತ್ರಿಕೆ

ಅವರು ಉಗ್ರ ನರಸಿಂಹನ ಬಳಿ ಹೋಗದಿರುವುದೇ ಕ್ಷೇಮ !

* * * *

ಭೂಗತ ಪಂಪುಗಳ ಮಾರಾಟದಲ್ಲಿ ಅಕ್ರಮ ; ತನಿಖೆ

—ಸುದ್ದಿ

ಸಂಬಂಧಪಟ್ಟವರೂ ಈಗ ಭೂಗತರಾಗಿರಬಹುದು !

* * * *

ಬೆಂಗಳೂರಿನಲ್ಲಿ ರೈಲು ಹಳಿ ತಪ್ಪಿ ದುರಂತ.

—ಸುದ್ದಿ

ಯಥಾ ಸರ್ಕಾರಂ, ತಥಾ ರೈಲುಂ !

* * * *

ಮಾನನಷ್ಟ ಮಸೂದೆ ಬರಲಿಲ್ಲ ಅಂತ ಅಪರಂಜಿ ಬಳಗದವರಿಗೆಲ್ಲ ಸಿಹಿ ಹಂಚಿದಳಂತೆ !

* * * *

ಶಾಖಾಹಾರಿ ಆಹಾರದಿಂದ ವಿಚಾರವಂತರು; ಕವಿಗಳು, ಸಾಹಿತಿಗಳು ಬೆಳೆಯಲು ಸಾಧ್ಯ, ಅಥ್ಲೀಟ್‌ಗಳಲ್ಲ

—ಶ್ರೀ ಖುಷ್‌ವಂತ್‌ಸಿಂಗ್

ಈ ಹೇಳಿಕೆ ಅವರಿಗೆ ಅನ್ವಯಿಸುವುದಿಲ್ಲ ತಾನೆ ?

ಲಲಿತೆಯ ಸಮಸ್ಯೆ

—ಭುವನೇಶ್ವರಿ ಹೆಗಡೆ

ಲಲಿತೆಗೆ ಬಿ.ಫ. ಮುಗಿದಾಗ ಅವಳ ಸಹವಾಸಿಗಳಾದ ನಾವೆಲ್ಲ ಸೇರಿ ಅವಳಿಗೊಂದು 'ಉಚಿತೋಪದೇಶಪ್ರದಾನ ಸಮಾರಂಭ ಏರ್ಪಡಿಸಿದೆವು. ಎಂ.ಎ.ಗೆ ಸೇರು ಎಂದು ನಾನೂ, ಕಂಪ್ಯೂಟರ್ ಕೋರ್ಸ್ ಸೇರು ಎಂದು ನಳಿನಾಕ್ಷಿಯೂ, ಪ್ರೈವೇಟ್ ಜಾಬ್‌ಗೆ ಸೇರಿಕೊಂಡು ಒಳ್ಳೇ ಜಾಬ್‌ಗೆ ಟ್ರೈ ಮಾಡು ಅಂತ ಶಾಮಾಲಾಳು ಸಕಾಲಿಕ ಸಲಹೆಗಳನ್ನು ಕೊಟ್ಟೆವು. ಲಲಿತಳಿಗೆ ಸಲಹೆ ಕೊಡುವದೆಂದರೆ ನಮಗೆಲ್ಲ ಒಂದು ಟೈಂ ಪಾಸ್ ಹವ್ಯಾಸ ಎನ್ನುವಷ್ಟರ ಮಟ್ಟಿಗೆ ಅವಳಿಗೆ ನಾವು ಸಲಹೆ ಕೊಡುತ್ತೇವೆ ಎಲ್ಲವನ್ನೂ ಕೇಳಿಸಿಕೊಂಡ ಲಲಿತಾ ತಾನು ಬಿ.ಎಡ್.ಗೆ ಸೇರುವದಾಗಿ ಸಾರಿದಾಗ ಬಿ.ಎಡ್. ಬಗ್ಗೆ ಇನ್ನೂ ಒಂದು ಐಡಿಯಾ ಇರದಿದ್ದ ನಾವು ಅದೂ ಆದೀತು ಎಂದು ಹೇಳಿದೆವು. ಅಂತೂ ನಮ್ಮ ಉದ್ಯೋಗಸ್ಥ ಮಹಿಳೆಯರ ತಾಣದ ಏಕಮೇವ ವಿದ್ಯಾರ್ಥಿನಿ ಲಲಿತ ಮತ್ತೂ ಒಂದು ವರ್ಷಕ್ಕಾಗಿ ವಿದ್ಯಾರ್ಥಿನಿಯೇ ಆಗಿ ಮುಂದುವರಿದಳು.

ಲಲಿತೆ ಸ್ವಭಾವತಃ ಒಂದು ಅಳುಮುಂಜಿ. ಅಷ್ಟೇ ಆದರೆ, ಹೋಗಲಿ ಎನ್ನಬಹುದಿತ್ತು. ತನ್ನ ಆ ಅಳುಬುರುಕತನದಿಂದ ಜತೆಯಲ್ಲಿ ಇದ್ದವರಿಗೂ ಅಳು ಬರುವ ತನಕದ ದೃಶ್ಯ ನಿರ್ಮಾಣ ಮಾಡುವ ವಿಚಿತ್ರ ಸಾಮರ್ಥ್ಯವನ್ನು ಹೊಂದಿದ್ದರಿಂದ ನಮಗೆಲ್ಲ ಆಗೀಗ ಕುತ್ತಿಗೆಗೆ ಬರುತ್ತಿತ್ತು. ಅದಕ್ಕೆ ಸರಿಯಾಗಿ ಅವಳಿಗೊಂದು ಸಿಕ್ಕಾಪಟ್ಟೆ ಸ್ಟ್ರಿಕ್ಟ್ ಆಗಿರುವ ವೃಶ್ಚಿಕ ರಾಶಿಯ ರೂಮ್ಮೇಟು. ಎಷ್ಟು ಹೊತ್ತಿಗೆ ಯಾವ ಕಾರಣಕ್ಕೆ ಯಾರನ್ನು ಕುಟುಂ ಎಂದು ಕಟಕಿಯಾಡಿ ಕುಟುಕುತ್ತಾಳೆಂಬುದು ನಿಕ್ಕಿ ಇಲ್ಲದ್ದರಿಂದ ನಾವೆಲ್ಲ ಸೇರಿ ಅವಳಿಗೆ 'ವೃಶ್ಚಿಕ ರಾಶಿಯವಳು', 'ಕುಟುಕು ಚಿಪ್ಪೆ' 'ಚೇಳು' ಎಂದೆಲ್ಲ ಅಡ್ಡ ಹೆಸರಿನಿಂದ ಕರೆಯುತ್ತೇವೆ ಅವಳು ಎದುರಿಗಿಲ್ಲದಾಗ ಅಂದಮೇಲೆ ಅಳುಮುಂಜಿ ಲಲಿತ ತನ್ನ ರೂಮ್ಮೇಟಿಗೆ ಹೆದರುವದು ಸಹಜ ತಾನೆ?

ಸಾಮಾನ್ಯವಾಗಿ ಸಮಸ್ಯೆಯೊಂದನ್ನು ಮೈಮೇಲೆ ತಂದುಕೊಂಡು ಮೂರು ಕಾರಣಗಳಿಂದ ಆ ಸಮಸ್ಯೆಯನ್ನು ಬಗೆಹರಿಸಿಕೊಳ್ಳಲಾರೆನೆಂದು ಪೇಚಾಡುವುದು ಲಲಿತೆಯ ಜಾಯಮಾನ. ಉದಾಹರಣೆಗೆ ಒಂದು ದಿನ ಕಾಲೇಜಿನಿಂದ ಬರುವಾಗ ರೂಮಿನ ಕೀಯನ್ನು ಎಲ್ಲೋ ಬೀಸಾಡಿ ಬಂದಿದ್ದಳು. ಹಾಸ್ಟೆಲ್ಲಿಗೆ ಬಂದವಳೇ "ಅಯ್ಯೋ

ಈಗೇನ್ಮಾಡೋದ್ರೀ ?" ಎಂದು ಒಂದೇ ಸಮನೆ ಪ್ರಾರಂಭಿಸಿದಳು. ನಮ್ಮ ತಕ್ಷಣದ ಸಲಹೆ– "ಬೀಗ ಒಡೆದು ಬಾಗಿಲು ತೆಗೆ" ಎಂಬ ಸಿಂಪಲ್ ಸಾಲ್ಯೂಶನ್.

ಆದರೆ ಲಲಿತೆಗೋ ಸಮಸ್ಯೆಗೆ ಯಥಾಪ್ರಕಾರ ಮೂರು ಉಪ ಸಮಸ್ಯೆ. ಚಿಲಕವನ್ನೇ ಮುರಿದು ತೆಗೆದರೆ ಮನೆಯ ಮಾಲಿಕರು ಬೈಯುತ್ತಾರೆ. ಬೀಗದ ತಟ್ಟೆಯನ್ನು ಜಜ್ಜಿ ಒಡೆದರೆ ಅದನ್ನು ಖರೀದಿಸಿದ್ದ ರೂಮ್ಮೇಟು ತನ್ನ ತಲೆ ಜಜ್ಜುತ್ತಾಳೆ. ಎರಡೂ ಮಾಡದಿದ್ದರೆ ಊರಿಗೆ ಹೋದ ರೂಮ್ಮೇಟು ಮರುದಿನ ಬರುವ ತನಕವೂ ತಾನು ಉಪವಾಸ ಅಂತೂ ಲಲಿತೆಗೆ ಘನಘೋರ ಅಳು ಬರುವ ಸಂಗತಿ. ಎಲ್ಲರೂ ಬೀಗ ಒಡಿ ಎಂದೇ ಸಲಹೆ ಕೊಟ್ಟಾಗ ರೂಮ್ಮೇಟಿನ ಬಾಯಿSSಕಿ ಎಂದು ಅಳತೊಡಗಿದ್ದಳು. ಅದನ್ನ ನೋಡಲಾರದ ನಮ್ಮ ಬೀಗ ಜಜ್ಜಿ ಒಡೆದು ಬೇರೆ ಬೀಗ ತಾ, ನಾಳೆ ನಿನ್ನ ರೂಮ್ಮೇಟು ಬರುತ್ತಲೇ ಮೊದಲು ಹಳೆಯ ಬೀಗದ ತಟ್ಟೇನ ಅವಳ ಬಾಯಲ್ಲಿ ತುರುಕಿ ಬೀಗ ಒಡೆಯಬೇಕಾಗಿ ಬಂದ ವಿಷಯವನ್ನು ನಂತರ ಹೇಳು ಎಂಬ ಸಲಹೆಯನ್ನು ನಾನು ಕೊಟ್ಟೆ.

ಇಂತಹ ಸಮಸ್ಯೆಯ ಕೂಸು ಲಲಿತ ಈಗ ಬಿ. ಎಡ್. ಮಾಡುವವರ ಮೂಲಕ ಇನ್ನೇನು ಪ್ರಾರಂಭಿಸಲಿದೆಯೋ ಎಂಬ ಆತಂಕದಲ್ಲೇ ಶುಭ ಹಾರೈಸಿ ಬಿ.ಎಡ್. ಕಾಲೇಜಿಗೆ ಕಳಿಸಿದೆವು. ಅರ್ಜಿ ಫಾರ್ಮು, ಯುನಿ ಫಾರ್ಮು, ಇತ್ಯಾದಿಗಳ ಹೆಸರಿನಲ್ಲಿ ಒಂದೆರಡು ದಿನ ಗೋಳುಗುಟ್ಟಿಸುತ್ತ ಕಾಲೇಜಿಗೆ ಹೋಗಿ ಬಂದು ಮಾಡತೊಡಗಿದಳು. ತಿದ್ದಿದ್ದನ್ನೇ ತಿದ್ದುವುದು, ಬರೆದಿದ್ದನ್ನೇ ಬರೆಯುವುದು ಮೊದಲಾದ ಬಿ.ಎಡ್. ಕೆಲಸಗಳಲ್ಲಿ ಮಗ್ನಳಾದವಳನ್ನು ಅವಳಷ್ಟಕ್ಕೆ ಬಿಟ್ಟು ಬಿಟ್ಟಿದ್ದೆವಾದರೂ ನಡು ನಡುವೆ ಒಂದೊಂದು ದಿನ ಅದೇನೋ ಪ್ರಯೋಗ ಮಾಡಲು ಬೇಕು ಒಂದು ತಂತಿಯ ಚೂರು ಇದೆಯಾ, ಹಾರ್ಲಿಕ್ಸ್ ಟಿನ್ನಿನ ಮುಚ್ಚಳ ಇದೆಯೊ ಅಂತೆಲ್ಲ ವಿಚಾರಿಸುತ್ತಾ ಕಸಕಡ್ಡಿಗಳಿಗೂ 'ಎಕೆಡಾಮಿಕ್ ಇಂಪಾರ್ಟೆನ್ಸ್' ಕೊಡುವವಳಂತೆ ವ್ಯವಹರಿಸುತ್ತಿದ್ದಳು.

ಒಂದು ದಿನ ನಾವೆಲ್ಲ ಆಫೀಸಿನಿಂದ ಬರುವಷ್ಟರಲ್ಲಿ ಹಾಲಿನ ನಡುವೆ ನೆಲದ ಮೇಲೆ ಒಂದು ದೊಡ್ಡ ಲೆಜ್ಜರ್ ಬುಕ್, ಒಂದಿಷ್ಟು ಹಾಳೆ ಪೆನ್ಸಿಲ್ಲು ರಬ್ಬರು ಚೂರು, ಕತ್ತರಿ...ಎಲ್ಲ ಎದುರಿಗಿಟ್ಟುಕೊಂಡು ಅಳುತ್ತ ಕೂತಿದ್ದಳು ಲಲಿತೆ.

"ಇವತ್ತು ಏನಾಯ್ತು ತಾಯೀ ಅಳುವಂಥದ್ದು ?" ಎಂದು ನಮ್ಮಲ್ಲೊಬ್ಬಳು ವಿಚಾರಿಸಿದ್ದಕ್ಕೆ ಯಥಾ ಪ್ರಕಾರ ಮೂರು ಮುಖದ ಸಮಸ್ಯೆಯೊಂದನ್ನು ಎದುರಿಗಿಟ್ಟಳು,

ನಾಳೆಯೇ ಬಿಡಿಸಿಕೊಂಡು ಹೋಗಬೇಕಿದ್ದ ಪ್ರಾಕ್ಟಿಕಲ್ ಬುಕ್‌ನಲ್ಲಿ ಬಿಡಿಸಿದ ಚಿತ್ರವೊಂದು ತಪ್ಪಾಗಿ ಹೋಗಿದೆ. ರಬ್ಬರ್‌ನಲ್ಲಿ ಬರೆಸಿ ತೆಗೆದು ಬೇರೆ ಬಿಡಿಸಿದರೆ ಕನ್ನಡಕ ಹಾಕಿದರೂ ಸೂಕ್ಷ್ಮ ಕಾಣುವ ಕಣ್ಣಿನ ಮಿಸ್ಸು ಸಿಕ್ಕಾಪಟ್ಟೆ ರೇಗ್ತಾರೆ. ತಪ್ಪು ಬಿಡಿಸಿದ್ದನ್ನೇ ತಗೊಂಡ್ಹೋಗಿ ತೋರಿಸಿದ್ರೆ ಮಾರ್ಕ್ಸ್ ಕಟ್ಟಾಗುತ್ತದೆ.... ಅಳುತ್ತಲೇ ಸಮಸ್ಯೆಯ ಮೂರೂ ಮುಖಗಳನ್ನು ವಿವರಿಸಿದಳು ಅಳುಮುಂಜಿ ಲಲಿತ.

“ಆ ಹಾಳೇನೇ ಪೂರ್ತಿ ಕಟ್ ಮಾಡಿ ತೆಗೆದುಬಿಟ್ಟು ಮುಂದಿನ ಪೇಜಿನಲ್ಲಿ ಹೊಸದಾಗಿ ಬಿಡಿಸಿಕೊಂಡು ಹೋಗು ತಗೋ ಈ ಚಾಕು” ಆ ಕ್ಷಣಕ್ಕೆ ಇದ್ದ ಒಂದೇ ಒಂದು ಮಾರ್ಗವನ್ನು ನಾವು ಸೂಚಿಸಿದೆವು.

“ಅಯ್ಯಯ್ಯೋ ಅದು ಸಾಧ್ಯವಿಲ್ಲ. ಹಾಗೆ ಕಟ್ ಮಾಡಿ ತೆಗೆದರೆ ಆ ಪೇಜಿನ ಈಚೆ ಬದಿ ಭಾಗ ಸಡಿಲಾಗಿ ಜೋಲುತ್ತೆ. ಅದು ಗೊತ್ತಾದ ನಮ್ಮ ಪ್ರಾಕ್ಟಿಕಲ್ ಮಿಸ್ಸು ರಂಪಾಟ ಮಾಡಿ ಬೈಯ್ತಾರೆ” ಸಮಸ್ಯೆ ಬಗೆಹರಿಸೋ ಏಕೈಕ ಮಾರ್ಗವನ್ನೂ ಒಪ್ಪಿಕೊಳ್ಳದೇ ಅಳುತ್ತಿದ್ದಳು ಲಲಿತೆ. ಸರಿ ಹೋಗಿ ಅದೇ ಮಿಸ್ಸ್ ಬಳಿ ಹೀಗ್ಹೀಗೆ ಆಗಿದೆ ನಿಮಗೆ ಸಿಟ್ಟು ಬರದೇ ಇರೋ ಹಾಗೆ ಏನು ಮಾಡ್ಬೇಕು ನೀವೇ ಸೂಚಿಸಿ” ಅಂತ ಕೇಳಿಬಿಡು ಎಂದು ಸಲಹೆ ಕೊಟ್ಟೆವು. “ಅಯ್ಯಯ್ಯೋ ಯಾರು ನಮ್ಮ ಪ್ರಾಕ್ಟಿಕಲ್ ಮಿಸ್ಸ್ ಹತ್ರಾನಾ ? ಅವರ ಹತ್ತಿರ ಪ್ರಾಬ್ಲೆಮ್ ತಗೊಂಡ್ಹೋಗೋದೂ ಅಂದ್ರೆ ಏನಂದುಕೊಂಡ್ರಿ? ಪ್ರಾಕ್ಟಿಕಲೀ ಇಂಪಾಸಿಬಲ್! ಅಷ್ಟು ಬೈತಾರೆ ಮರ್ಯಾದಿ ತೆಗೀತಾರೆ...ಬೂ ಊ.. ಊ...ಅಳು ಮುಂದುವರಿದೇ ಇತ್ತು.

ಬಿ.ಎಡ್. ಮಾಡೋದನ್ನೇ ಬಿಟ್ಟುಬಿಡು ಎಂದು ಹೇಳಲು ಮನಸ್ಸಾದರೂ ಬೇರೆ ಕೋರ್ಸುಗಳಿಗೆಲ್ಲ ಅವಧಿ ಮೀರಿದೆ. ಅವಳ ಅಳು ನೋಡಿದರೆ ಸುಮ್ಮನಿರುವಂತೆಯೂ ಇಲ್ಲ. “ತಗೋ ಈ ಚಾಕು ಹೋಗಿ ಆ ನಿನ್ನ ಪ್ರಾಕ್ಟಿಕಲ್ ಮಿಸ್ಸ್‌ನ ನಾಲಿಗೆ ಕತ್ತರಿಸಿ ಹಾಕಿ ಚಿತ್ರ ತಪ್ಪಾಗಿದೆ ಏನು ಮಾಡ್ತೀರೋ ಮಾಡಿ ಎಂದು ಹೇಳು” ಎಂಬ ಸಲಹೆ ಕೊಟ್ಟೆ.

ಮರುದಿನ ಕ್ಲಾಸಿನಲ್ಲಿ ಆ ಮಿಸ್ಸು ಕೇಳುವುದರೊಳಗೇ ಲಲಿತೆ ಬುಳು ಬುಳು ಅತ್ತಿದ್ದರಿಂದ ಇವಳು ನಿರೀಕ್ಷಿಸಿದ್ದ ಪ್ರಮಾಣದಲ್ಲಿ ಬೈಗಳು ಸಿಗಲಿಲ್ಲವಾದರೂ “ಮುಂದೆ ನೀವು ಮೇಷ್ಟ್ರಾಗೋದು ಹೀಗಿದ್ರೆ ಹೇಗೆ ?” ಅಂತ ಕೇಳಿದ್ದರಂತೆ. ನನಗೂ ಲಲಿತೆಯನ್ನು ನೋಡಿದಾಗೆಲ್ಲ ಹಾಗೇ ಅನ್ನಿಸೋದು ನಾಳೆ ಇವಳು ಮೇಷ್ಟ್ರು ಆಗಿ ವಿದ್ಯಾರ್ಥಿಗಳ ಎದುರು ಸಮಸ್ಯೆಯೊಂದನ್ನು ಇಟ್ಟು ಮೂರು ಮುಖ ಅಂತ ಅಳ್ತಾ ಅಳ್ತಾ ಕೂತ್ಬಿಟ್ರೆ ಪಾಪ ಆ ಕಂದಮ್ಮಗಳು ಈ ಮಿಸ್ಸಿಗೆ ಏನು ಸಲಹೆ ಕೊಟ್ಟಾವು ?

ವಕ್ರ ದೃಷ್ಟಿ

—ಆವಾಲಕ

SEOULಗೆ ನಮ್ಮವರು ಹೋದಾಗಲೇ ಗೊತ್ತಿತ್ತು ಬಂದೇ ಬರ್ತಾರೇ ಅಂತ !

ಅದೇ ವಾಪಸ್ಸು ! !......

○ ○ ○ ○ ○

ನಮ್ಮ ಆಟಗಾರರಿಗೆ, Selection Committeeಗೆ ನಮ್ಮ ಸಹಾನುಭೂತಿಯೊಂದಿಗೆ ಇನ್ನೊಂದು ಮಾತು.

Search your Soul

Having come from SEOUL.

○ ○ ○ ○ ○

ಬೇಂದ್ರೆ ಬದುಕಿದ್ದಿದ್ದರೆ ಹೀಗೆ ಹಾಡುತ್ತಿದ್ದರೆ ?

ಮಕ್ಕಳಿವರೇ ನಮ್ಮ—ಮಕ್ಕಳಿವರೇ ನಮ್ಮ

ನಾ–ಹಡೆದ ಎಂಭತ್ತು ಕೋಟಿ.

ಚಿನ್ನ ಬೇಡೆನೆಗೆ–ಬೆಳ್ಳಿ ಬೇಡನೆಗೆ

ಕೊನೆಗೆ ಕಂಚಾದರೂ ತಾ ಎಂದೆ.

ಕಂಚು ತಾರೆಂದರೆ ಹೆಂಚು ತಂದಿಹರಮ್ಮ

ನಾ ಹಡೆದ ಎಂಭತ್ತು ಕೋಟಿ !

○ ○ ○ ○ ○

ಏನ್ರೀ ನಮ್ಮ ಉಷಾ ಕೈ ಕೊಟ್ಟು ಬಿಟ್ಟರಲ್ಲ

— ಅವರು ಕೈ ಕೊಡೋದಿಕ್ಕೆ ಕಾರಣ
ಅವರಿಗೆ ಕಾಲು ಕೊಟ್ಟಿತು.

— ಅಲ್ಲವೇ ? ನಂಬಿಯಾರ್ರೀ ?

o o o o o

ಈಗ ಯಾರನ್ನು-ಯಾರು ? ನಂಬಬೇಕು-ನಂಬಿಯಾರ್ರೀ !

"They erred in ನಂಬಿಂಗ್-ನಂಬಿಯಾರ್" ಅಹುದಾದರಹುದೆನ್ನಿ.

o o o o o

ಅಂದಹಾಗೆ P.T. ಉಷಾಗೆ P.T. ನೇ ಸಾಲದು ಎಂದು (P.T.—Physical Training)—ಬೆಂಜಾನ್ಸನ್ ಹೇಳಿಲ್ಲವಂತೆ.

o o o o o

Not to win but to Participate
Is the aim of every sporting Soul
Never to win only to Participate
Was our sole aim in Seoul.

o o o o o

ಹೆಗ್ಗಡೆಯವರ exit ಬೊಮ್ಮಾಯಿಯವರ entry ಕರ್ನಾಟಕದಲ್ಲಿ Controversy Solve ಆಯಿತು ಅಲ್ಲವೇ ?

— ಇಲ್ಲಾ Scene Shift ಆಯಿತು ಬೆಂಗಳೂರಿಂದ ದೆಹಲಿಗೆ ಅಷ್ಟೆ.

o o o o o

ವಿಪಕ್ಷಗಳ–ಏಕತೆಗಾಗಿ–ನಡೀತಾ ಇರೋ ಪ್ರಯತ್ನಗಳು–ಹೇಳಿಕೆಗಳು–ಪ್ರತಿ ಹೇಳಿಕೆಗಳನ್ನು ಓದಿದರೆ–

— ಪತ್ರಿಕಾ ಸ್ವಾತಂತ್ರ್ಯ–ವಾಕ್ ಸ್ವಾತಂತ್ರ್ಯಗಳಿಂದ ಸಿಗೋ ಮನರಂಜನೆ–ಬೇರೆ ಯಾವುದರಿಂದಲೂ ದೊರೆಯೋಲ್ಲ ಅಲ್ಲವೆ ?

o o o o o

Phone ಗಲಾಟೆ–ಅಸೆಂಬ್ಲೀಲಿ ನಡೆದು–ಅವರೇ ಬರಲಿ ಅಂತ ಇವರು–ಅವರೇ ಯಾಕೆ ಬೇಕೊಂತ–ಆವರ ಕಡೆಯವರು ಯಾರು ಬರಬೇಕು–ಯಾರು ಬೇಡಾ–ಅನ್ನೋದಿಕ್ಕೆ–ಹಿಂದೆ ಏನಾದರೂ ಹೀಗೆ ನಡೆದಿತ್ತೆ ಎಂಬುದಕ್ಕೆ–ಕಡತಾ ನೋಡ್ತೀನಿ ಅಂತಾರೆ ಅಧ್ಯಕ್ಷರು.

—"ಅವರಿಗೂ ಆದದ್ದು ಆಗಿದೆ–ಯಾರು–ಯಾರಿಗೆ–ಏನಾಗಬೇಕೆಂದಿದ್ದರೋ ಅದೂ ಆಗಿದೆ. ಬೆಟ್ಟದಷ್ಟು ಬೇರೆ ಕೆಲಸ ಇರೋವಾಗ ಪುನಃ ಯಾಕೆ ಸತ್ತ ಕುದುರೆ ಚಚ್ಚೋದು"–ಅಂತ ವೃದ್ಧರೊಬ್ಬರು ಪೇಪರು ಓದಿ–ಎಂದಾಗ

"ಅದಕ್ಕೆ ನಿಮಗೆ ಅರಳು ಮರಳು"–ಎಂದನಂತೆ ಪಡ್ಡೆ ಹುಡುಗ.

o o o o o

ಈ ವಿಚಾರದಲ್ಲಿ ನನ್ನ ಅನುಭವ ಹೇಳಬೇಕೂ ಎಂದರೆ

ಮೊನ್ನೆ ಕಛೇರೀಲಿ Phone ಮಾಡೋಣಾಂತ Receiver ಎತ್ತಿದೆ

ಇನ್ನು ರಿಂಗೇ ಮಾಡಿಲ್ಲ, ಕೇಳಿ ಬಂತು ಡೈಲಾಗು

"ಯಾವಾಗ ಬರ್ತಾನಂತೆ ?"

....

"ಬೇಡಾನ್ನು"

....

"ಅವನಿದ್ದರೆ–ಕೆಲಸ ಆಗೋಲ್ಲ"

....

"ಸರೀ ಅಂಥಹವನು...ನೋಟೀಸ್ ಕೊಟ್ಟು ಓಡಿಸು"


....

"ರೂಲ್ಸ್ ಇಲ್ಲದಿದ್ದರೆ–ಯಾವುದರಲ್ಲಾದರೂ ಅವನ್ನ ಸಿಕ್ಕಿಸು"

o o o o o

ಪ್ರಮಾಣವಾಗಿ ಹೇಳ್ತೀನಿ ಇದರ Reference ಊ—Context ಊ ದೇವರೇ ಬಲ್ಲ! ಸ್ವಾರಸ್ಯವಾಗಿತ್ತು ಕೇಳೀ ಬಿಟ್ಟೆ–ನೀವು ಬಿಡ್ತಾ ಇದ್ರಾ–ಬಿಟ್ಟಿ ಸಿನಿಮಾನ?

— ಹೀಗೆ ಏಕೆ? ಆಗಿರಬಾರದು. ಆದ್ದರಿಂದ ತಪ್ಪು Phone ದೇ. Punish the phone. (left to the readers to read between).



ನಿಮ್ಮಪ್ಪನಿಗಿಂತ, ನಮ್ಮಪ್ಪನೇ ಹೋಂವರ್ಕ್ ಚೆನ್ನಾಗಿ ಮಾಡ್ತಾರೆ, ಗೊತ್ತಾ.

ಒಲಿಂಪಿಕ್ ಹೈಲೈಟ್ಸ್

ಅ. ರಾ. ಸೇ.

೧

ಒಲಿಂಪಿಕ್ಸ್‌ನಲ್ಲಿ ಗೆದ್ದರೇನು ಸ್ವರ್ಗವೇ ? ಸೋತರೆ ರೌರವ, ಕುಂಭೀಪಾಕ, ಅಂಧ ತಮಸ್ಸೇ ಮೊದಲಾದ ನರಕಗಳೇ ? ಎಂದು ಸಂಬಂಧಿಸಿದವರು ಕೇಳ ಬಹುದು. ಭಾಗವಹಿಸಿದ್ದೇ ಬಂತು, ಗೆಲುವು ಮುಖ್ಯವಲ್ಲ. ಭಾಗವಹಿಸುವು ದಕ್ಕೆ ಏನು ಬೇಕೋ ಅದನ್ನು ಮಾಡಿದರಾಯಿತು. ಡ್ರಮ್‌ಗಟ್ಟಲೆ ಒಲಿಂಪಿಕ್ ಸ್ಪಿರಿಟ್ ತುಂಬಿಕೊಂಡು ಬರಬಹುದು.

ರ್‍ಯಾಂಕುಗಳಲ್ಲಿ ಎರಡು ವಿಧ ಎಂದು ಎಲ್ಲರೂ ಬಲ್ಲರು. ಕೆಳಗಿನಿಂದ ಪ್ರಥಮ ರ್‍ಯಾಂಕ್ ಬಂದವರಿಗೂ ಒಂದು ಪ್ರಶಸ್ತಿ ಬೇಕು. ತಗಡು, ಪ್ಲ್ಯಾಸ್ಟಿಕ್ ತುಕ್ಕು ಹಿಡಿದ ಕಬ್ಬಿಣಗಳ ಮೆಡಲ್ ಇಡಬೇಕು. ಆಗ ನಮಗೂ ಮೆಡಲ್ ಸಿಗುತ್ತಿತ್ತು.

ನಮಗೆ ಹೀಗಾಗಲು ಮುಖ್ಯ ಕಾರಣ: ಅಂತರರಾಷ್ಟ್ರೀಯ (ಈಚೆಗೆ ಬಳಸುತ್ತ ಲಿರುವ ಅಂತಾರಾಷ್ಟ್ರೀಯ—ಇದನ್ನು ಉಚ್ಚಾರಣಾ ಸೌಲಭ್ಯಕ್ಕಾಗಿ ಅಂತ ರಾಷ್ಟ್ರೀಯ ಮಾಡಿಕೊಂಡಿರುವವರೂ ಇದ್ದಾರೆ. ಅಲ್ಲಿ ಶಬ್ದಗಳ ಅದಲು ಬದಲು ಮಾಡುವುದು ನಿಷಿದ್ಧ) ನ್ಯಾಯದ ಅಸಮತೋಲನ. ಆರ್ಥಿಕ ವ್ಯವಸ್ಥೆಯ ಪುನರ್ರಚನೆ ಹೇಗೆ ಅಗತ್ಯವೋ ಮೆಡಲ್ ಹಂಚಿಕೆಯ ವ್ಯವಸ್ಥೆಯಲ್ಲಿ ಪರೆಸ್ಟ್ರೋಯಿಕ ಜಾರಿಗೆ ಬರ ಬೇಕು.

ಪ್ರಬಲ ರಾಷ್ಟ್ರಗಳಿಗೇ ಚಿನ್ನ, ಬೆಳ್ಳಿಯನ್ನು ಕೊಳ್ಳೆ ಹೊಡೆಯಲು ಅವಕಾಶ ವಿರುವಾಗ ನ್ಯಾಯವೆಲ್ಲಿ ಬರಬೇಕು ? ಜನಸಂಖ್ಯೆಯ ಆಧಾರದ ಮೇಲೆ, ಕ್ರೀಡೆ ಗಳಲ್ಲಿ ಅದಕ್ಷತೆಯ ಆಧಾರದ ಮೇಲೆ ಮೆಡಲುಗಳ ಹಂಚಿಕೆ ನಡೆಯಬೇಕು. ಹಾಗಾದರೆ ವಿಶ್ವದಲ್ಲೇ ಹೆಚ್ಚು ಜನಸಂಖ್ಯೆಯುಳ್ಳ ರಾಷ್ಟ್ರಗಳಲ್ಲಿ ಎರಡನೆಯದಾದ ನಮ್ಮ ನಾಡಿಗೆ ಅರ್ಹ ಮನ್ನಣೆ ದೊರೆತಂತಾಗುತ್ತದೆ. ಈಗ ನಡೆದಿರುವಂತೆಯೇ ಮುಂದೂ ನಡೆದರೆ, ಪದಕರಹಿತ ರಾಷ್ಟ್ರಗಳಿಗೆ ಬೇರೊಂದು ಕ್ರೀಡಾ ಕೂಟದ ರಚನೆ ಅನಿವಾರ್ಯವಾಗುತ್ತದೆ.

೨

ಇನ್ನೊಂದು ಗಮನ ಸೆಳೆಯುವ ಅಂಶವನ್ನು ಪರಿಶೀಲಿಸಬೇಕಾಗಿದೆ. ಒಂದು ಸ್ಪರ್ಧೆಯಲ್ಲಿ ಗೋಲ್ಡ್ ಮೆಡಲ್ ಪಡೆದವನು/ಳು, ತಮ್ಮ ಆನಂದವನ್ನು, ಕೈಯನ್ನು

ಝುಳುಪಿಸಿ, ಕುಣಿದು ಕುಪ್ಪಳಿಸುವುದು ಸರಿಯೇ ? ನಮ್ಮ ಊರಿನಲ್ಲಿ ನಾವೆಲ್ಲಾ, ಭಾರತೀಯರನ್ನು ಆಕಸ್ಮಾತ್ ತೋರಿಸುತ್ತಾರೆಂದೇ ಟೀವಿ ನೋಡುತ್ತಿದ್ದೆವೇ ಹೊರತು, ಇನ್ನಾವ ಕಾರಣಕ್ಕೂ ಅಲ್ಲ. ಅವರನ್ನು ತೋರಿಸದೆ, ಕಾಮೆಂಟರಿಯಲ್ಲಿ ಅವರ ಹೆಸರನ್ನು ಹೇಳದೆ ಇದ್ದುದರಿಂದ, ನಮಗೆ ಆಟಗಳ ಅರ್ಥವೇ ಆಗಲಿಲ್ಲ. ಯಾವುದಾದರೂ ಓಟದ ಸ್ಪರ್ಧೆಯಲ್ಲಿ ಎಲ್ಲರಿಗಿಂತ ಹಿಂದುಳಿದವರೇ ಭಾರತೀಯರಿರಬೇಕು ಎಂಬ ಅನುಮಾನ ಬಂದು ಅವರನ್ನೇ ನೋಡಿ ಹರ್ಷಿಸುತ್ತಿದ್ದೆವು.

೩

ನಗಬೇಡಿ ; ಹಳ್ಳಿ, ಗುಗ್ಗುಗಳು ನಾವು. ಹೈಲೈಟ್ಸ್ ನೋಡುತ್ತಾ ಕುಳಿತಾಗ, ನನ್ನ ಮಿತ್ರ ಏನಿದು, ಏನಿದು, ಅಬ್ಬಬ್ಬಾ, ಅಲಬಲಲೇ, ಹಹ್ಹಹ್ಹಾ ಇತ್ಯಾದಿ ಪ್ರಶ್ನಾರ್ಥಕಗಳನ್ನೂ, ಉದ್ಗಾರಗಳನ್ನೂ ಹೊರಡಿಸುತ್ತಾ ಎಂದರೆ ಕೂಗುತ್ತಾ ಇದ್ದ. ಒಂದು ಆಟ ಮುಗಿದಾಗ 'ಏನಲೇ ? ಈಗ ತೋರ್ಸಿದ್ರಲ್ಲಾ ಇದೇನು ಹೆಣ್ಣಾಳುಗಳ ಆಟಾನೋ, ಗಂಡಾಳುಗಳದ್ದೋ ? ಎಂದು ಕೇಳುತ್ತಿದ್ದ.

ಇದರಿಂದ ಒಲಿಂಪಿಕ್ಸ್ ಕ್ರೀಡೆಗಳು ಪುರುಷ ಪ್ರಧಾನ ಯುಗವನ್ನು ಕೊನೆಗೊಳಿಸುವತ್ತ ದಾಪುಗಾಲನ್ನಿಡುತ್ತಿವೆ, ಎಂದರ್ಥವೇ ?

೪

ಇದೀಗ ಬಂಪರ್ ಪ್ರಶ್ನೆ ಇದು ನ್ಯಾಯವೇ ? ನಾನು ಕೇಳುತ್ತಿರುವುದು ಹಲವರು ನನ್ನೊಡನೆ ಕೇಳಿದ ಪ್ರಶ್ನೆಗಳನ್ನು ನನಗೆ ಬೆಳ್ಳಿ ತೆರೆಯ ಆಕರ್ಷಣೆ ಬಹು ಕಡಿಮೆ. ಇದರಿಂದಲೇ ನಾನು ಅತ್ಯಂತ ಹಿಂದುಳಿದವರ ಗುಂಪಿಗೆ ಸೇರಲು ಅರ್ಹತೆ ಪಡೆದಿದ್ದೇನೆ.

ಬೆನ್ ಜಾನ್ಸನ್ನನ ಪದಕವನ್ನು ಕಿತ್ತುಕೊಂಡದ್ದು ಸರಿಯೇ ?

ಈ ಪ್ರಶ್ನೆಗೆ ನನ್ನ ಉತ್ತರ ಹೀಗಿದೆ : ಅದು ಅತ್ಯಂತ ಸೂಕ್ತ ಕ್ರಮ. ಇದರಿಂದ ಡ್ರಗ್ಸ್ ಅಬ್ಯೂಸ್‌ಗೆ (ಮದ್ದುಗಳ ದುರುಪಯೋಗ) ಪೆಟ್ಟುಕೊಟ್ಟಂತಾಯಿತು. ಒಂದಲ್ಲ ಹತ್ತು ಜನರನ್ನು ಅನರ್ಹತೆಗೊಡ್ಡಿದ್ದರಿಂದ ಇನ್ನು ಮುಂದಾದರೂ ಆಟಗಾರರು ಮದ್ದುಗಳ ಸೇವನೆ ಕೈಬಿಡುವಂತಾಗುವುದು. ಒಲಿಂಪಿಕ್ಸ್ ಶುದ್ಧ, ಸ್ವಚ್ಛ ಆಗುತ್ತದೆ.

ಇದಕ್ಕೆ ನಮ್ಮ ಶಾಸ್ತ್ರಿಗಳ ಸವಾಲು ಇದು :

ಕೋಲ್‌ರಿಜ್ ಕೀಟ್ಸ್ ಮೊದಲಾದವರು ಡ್ರಗ್ಸ್ ಉಪಯೋಗಿಸಿದರು ಆದರೆ ಅವರು ಜೀವಮಾನವಿರುವವರೆಗೆ ಪದ್ಯ ಬರೆಯಕೂಡದು. ಅವರು ಬರೆದದ್ದನ್ನು ಪ್ರಕಟಿಸಕೂಡದು ಎಂದೇನಾದರೂ ಬಹಿಷ್ಕರಿಸಲಿಲ್ಲವೇಕೆ ? ಅವರ ಪದ್ಯಗಳು ಚೆನ್ನಾಗಿಲ್ಲವೇ ? ಅವರ ಆರೋಗ್ಯ ಹಾಳಾಯಿತು. ಅದು ನಮ್ಮ ಸಮಸ್ಯೆಯೇ ? ವೃತ್ತಿಪರ, ಹವ್ಯಾಸಿ ಕ್ರೀಡಾಪಟುಗಳ ನಡುವಿನ ಅಂತರ ಅಳಿಸಿ ಹೋಗಿಲ್ಲವೇ ? ಕ್ರೀಡೆ ವೃತ್ತಿಯಾದರೆ, ಅದನ್ನು ನಿಜವಾಗಿ ಕ್ರೀಡೆ ಎನ್ನಬಹುದೇ ? ರೊಕ್ಕ ಕಮಾಯಿಸುವುದಾದರೆ ಉಳ್ಳಾಗಡ್ಡೆ, ಬೀಡಿ ವ್ಯಾಪಾರ ಮಾಡಲಿ. ಪುನಃ ಸಂತೋಷಕ್ಕಾಗಿ ಆಡಿದುದೇ ಆಟವಲ್ಲವೇ ? ಈಗಿರುವಂತಿದ್ದರೆ ಸ್ವಚ್ಛತೆ, ಶುದ್ಧತೆ ಎಷ್ಟು ಉಳಿಯಲು ಸಾಧ್ಯ ?

ತರಲೆ ತೆಗೆಯಲು ಹೀಗೆಲ್ಲಾ ಕೇಳುತ್ತಿರುವೆ ಎನ್ನಬಹುದು. ಆದರೆ ಈ ಪ್ರಶ್ನೆಗಳನ್ನು ಕೇಳುತ್ತಿರುವವನು ನಾನಲ್ಲ, ನನ್ನ ಮಿತ್ರನು. ನಾನು ಕೇವಲ ಲಿಪಿಕಾರ.

ಈಗ ಇಪ್ಪತ್ತು ವರ್ಷಗಳ ಹಿಂದೆ ಒಂದು ರಿಕಾರ್ಡ್ ಆಗಿದ್ದುದನ್ನು ಇನ್ನೂ ಮುರಿದಿಲ್ಲವೆಂದು ಹೇಳುತ್ತಾರೆ. ಆ ರಿಕಾರ್ಡನ್ನು ಸ್ಥಾಪಿಸಲು ಅವನಿಗೆ ಹೇಗೆ ಸಾಧ್ಯವಾಯಿತು ? ಎಲ್ಲಾ ಆಟಗಾರರು ಭಾಗವಹಿಸುವ ಎಲ್ಲಾ ಪಂದ್ಯಗಳ ಮೊದಲು ಮತ್ತು ಆನಂತರ ಟೆಸ್ಟ್ ಮಾಡುವ ವ್ಯವಸ್ಥೆ ಇದ್ದರೆ, ಕ್ರೀಡೆಗಳಲ್ಲಿ ಭಾಗವಹಿಸಲು ಯಾರು ಬರುತ್ತಾರೆ ?

ನಂಬಿಕೆಯೇ ಕ್ರೀಡಾ ಮನೋಭಾವದ ಮೂಲ ಉಗಮವಲ್ಲವೇ ? ಅಂದ ಮೇಲೆ ಬೆನ್‌ಜಾನ್ಸನ್ನಿಗೇ ಏಕೆ ಶಿಕ್ಷೆ ?

ಮೊದಲು ಕೆಲವೇ ಕೆಲವು ಡ್ರಗ್ಸುಗಳಿದ್ದವು. ಈಗ ನೂರಕ್ಕೂ ಹೆಚ್ಚು ಡ್ರಗ್ಸುಗಳಿವೆಯಂತೆ. ಇವನ್ನೆಲ್ಲಾ ಟೆಸ್ಟ್ ಮಾಡಬಹುದು. ಟೆಸ್ಟ್‌ಗಳಿಲ್ಲದ ಡ್ರಗ್ ಉಪಯೋಗಿಸಿದವನು ಮಾಡಿದ ಬಾರಿ ಖೂನ್ ಮಾಫಿಯೋ ?

ಇನ್ನೂ ಒಂದು ಪ್ರಶ್ನೆ ಕೇಳುತ್ತಾರೆ.

ವಿಶ್ವದಾದ್ಯಂತ ಕ್ರೀಡೆಗಳ ಜೊತೆಗೇ ಮದ್ದು ಉಪಯೋಗ ನಡೆದಿದೆ ಎನ್ನುತ್ತಾರೆ. ಈ ಮದ್ದುಗಳನ್ನು ಸರಿಯಾಗಿ ಸೇವಿಸಿದರೆ ಪತ್ತೆ ಹಚ್ಚಲು ಆಗುವುದಿಲ್ಲವಂತೆ. ಬೆನ್ ಹಾಗೆ ಮಾಡದಿದ್ದುದೇ ತಪ್ಪೇ ?

ಮತ್ತೊಂದು ಪ್ರಶ್ನೆ :

ಕ್ರೀಡಾ ವೈದ್ಯಕೀಯದಲ್ಲಿದ್ದವರೇ ಈ ಡ್ರಗ್ಗುಗಳನ್ನು ಕಂಡು ಹಿಡಿದರೋ ಬೇರೆಯವರೋ ? ಇಲ್ಲೇನೋ ಪತ್ತೆ ಹಚ್ಚಿದ್ದಾಯಿತು, ಎಲ್ಲಾ ಕಾಲದಲ್ಲಿ ಎಲ್ಲರನ್ನೂ ಪರೀಕ್ಷಿಸುವುದು ಸಾಧ್ಯವೇ ?

ದೈಹಿಕ ಮದ್ದುಗಳನ್ನು ಪರೀಕ್ಷಿಸಿದ್ದಾಯಿತು. ಮಾನಸಿಕ ಉತ್ತೇಜಕಗಳಿಗೂ ಇದನ್ನು ಅನ್ವಯಿಸಿದರೆ ಹೇಗೆ ?

ಇಂತಹ ಸಂದೇಹ ಸಂದೋಹಗಳ ಸಂದೇಶವಿಷ್ಟೇ. ಹಳ್ಳಕೊಳ್ಳಗಳು, ಕಳ್ಳ ಹೆಂಡಗಳು ಮೊದಲಾದವನ್ನು ನೀನೇಕೆ ಸೃಷ್ಟಿಸಿದೆ ? ಇಂತಹ ನೋವಿನಿಂದ ಕೂಡಿದ ಜೀವನವನ್ನು ನೀನೇಕೆ ಸೃಷ್ಟಿಸಿದೆ ? ಮೊದಲು ಅಡೆತಡೆಗಳನ್ನೊಡ್ಡಿ, ಪ್ರಲೋಭನ ಮಾಡಿ, ನಂತರ ನಾನು ಬಿದ್ದಾಗ ನೀನೇಕೆ ನಗುವೆ ? ಎಂದು ಕವಿಗಳು ವಿಧಿ, ದೇವರು ಮೊದಲಾದವನ್ನು ನಿಂದಿಸುತ್ತಿದ್ದರು.

ಈ ಮದ್ದುಗಳನ್ನು ವಿಧಿ ಸೃಷ್ಟಿಸಲಿಲ್ಲ; ಮಾನವನೇ ಸೃಷ್ಟಿಸಿದ. ಕ್ರೀಡಾಪಟುಗಳಿಗೆ ಒಪಗಿಸಿದವನೂ ಅವನೇ, ಅವರಿಗೆ ಪ್ರಶಸ್ತಿಯನ್ನು ಕೊಟ್ಟವನೂ ಅವನೇ, ಕಿತ್ತುಕೊಂಡವನೂ ಅವನೇ ! ಕವಿವಾಣಿಯನ್ನು ಕೋಟ್ ಮಾಡುವುದಾದರೆ 'ಇದು ವಿಧಿಯ ವಹಿವಾಟಿಗಿಂತಲು ಅಬದ್ಧ.'

ಔ

ಪ್ರಶ್ನೆ—"ಸೋಲಿನಲ್ಲೇಕೆ ಸೋಲು ? "

ಉತ್ತರ —'ನಾವು ತಟಸ್ಥರು' ಅಥವಾ 'ನಮ್ಮದು ಅಲಿಪ್ತ ಧೋರಣೆ.'

ಓ

ಸಂಬಂಧವಿಲ್ಲದಿದ್ದರೂ ಇಲ್ಲೊಂದು ಬಾಲಂಗೋಚಿ ಸೇರಿಸಬೇಕಾಗಿದೆ.

ಯಾರೋ ಪ್ರಾಜ್ಞರು ಹೇಳಿರಬೇಕು 'ಪತ್ತು ಪುಟಗಳಲ್ಲಿ ಹೇಳಬಹುದಾದುದನ್ನು ಒಂದು ವ್ಯಂಗ್ಯ ಚಿತ್ರವೇ ಹೇಳುತ್ತದೆ'.

ಒಂದೇ ಪ್ರಶ್ನೆಗೆ ಅವರು ಉತ್ತರಿಸಬೇಕು ; ವ್ಯಂಗ್ಯ ಚಿತ್ರಗಳಲ್ಲಿ ಕೆಳಗೋ ಬಳಗೋ ಶಬ್ದಗಳೇಕೆ ಕಾಣುತ್ತವೆ ; ಶಬ್ದಗಳಿಲ್ಲದೆ ಅವು ಏನು ಅರ್ಥ ಕೊಡ ಬಲ್ಲವು ?

17

ಗುಜರಾತ್ ಯಾತ್ರೆ - ನೆನಪುಗಳು

—ಶಿವು

ಮೂವತ್ತರ ದಶಕದಲ್ಲಿ ತುಮಕೂರು ಮಧುಗಿರಿ ಪ್ರದೇಶಗಳಲ್ಲಿ ಹರಿಕಥೆ ದಾಸರು ಯಾತ್ರೆ ನಡೆಸುತ್ತಿದ್ದ ವೈಖರಿಯನ್ನು ಹಿರಿಯ ಮಿತ್ರರೊಬ್ಬರು ನನಗೆ ವಿವರಿಸುತ್ತಿದ್ದರು. ದಾಸರು ಊರಿಗೆ ಬಂದರೆ, ಅನುಕೂಲಸ್ಥರೊಬ್ಬರ ಮನೆಯಲ್ಲಿ ಠಿಕಾಣಿ. ಸಂಜೆಯ ಹರಿಕಥೆಯ ಬಗ್ಗೆ, ಹಗಲಿನಲ್ಲಿ ಊರ ಸುತ್ತ ಡಂಗುರ, ಊರ ದೇವಸ್ಥಾನದ ಪ್ರಾಂಗಣದಲ್ಲಿ, ಪೆಟ್ರೊಮ್ಯಾಕ್ಸ್ ಬೆಳಕಿನಲ್ಲಿ, ಪೌರಾಣಿಕಕಪ್ರಸಂಗ ವೊಂದರ ವರ್ಣನೆ. ಮಧ್ಯೆ ಮಧ್ಯೆ ಹಾಡುಗಾರಿಕೆ. ಕೊನೆಗೆ ಮಂಗಳಾರತಿ ಪ್ರಸಾದ ವಿನಿಯೋಗ. ಹಲವು ದಿನಗಳ ನಂತರ ಮುಂದಿನ ಊರಿಗೆ ಪ್ರಯಾಣ.

ಯಾಕೆ ಹೇಳುಕ್ಕೆ ಬಂದೆ ಅಂದರೆ, ನಮ್ಮ ಗುಜರಾತ್ ಯಾತ್ರೆಯೂ ಸಹ ಬಹುಮಟ್ಟಿಗೆ ಹರಿಕಥೆ ದಾಸರುಗಳ ಯಾತ್ರೆಯನ್ನು ಹೋಲುತ್ತಿತ್ತು. ದಾಂಡಿ ಯಿಂದ ಹೊರಟ ನಮ್ಮ ಪಯಣ ಹತ್ತು ದಿನಗಳಲ್ಲಿ ಸಬರ್‌ಮತಿ ಆಶ್ರಮವನ್ನು ಮುಟ್ಟುವ ಗುರಿ. ಮಾರ್ಗ ಮಧ್ಯದ ನವಸಾರಿ, ಕರಾಡಿ, ವದೋದರ, ನಡಿ ಯಾದ್‌ಗಳಲ್ಲಿ ಒಂದೆರಡು ದಿನ ಠಿಕಾಣಿ. ಆ ಊರುಗಳ ಸಹೃದಯ ನಾಗರಿಕರುಗಳ ಮನೆಗಳಲ್ಲಿ ವಸತಿ ಹಾಗೂ ಆತಿಥ್ಯ. ಸಂಜೆ ಬಾಪೂಜಿಯವರ ವಿಚಾರಧಾರೆ ಹಾಗೂ ನೈತಿಕ ಮೌಲ್ಯಗಳ ಬಗ್ಗೆ ಉಪನ್ಯಾಸ ಹಾಗೂ ಚರ್ಚೆ. ಆಗಾಗ್ಗೆ ಭಾರತದ ವಿವಿಧ ಭಾಷೆಗಳಲ್ಲಿ ದೇಶದ ಇಂದಿನ ಪರಿಸ್ಥಿತಿಯ ಸುಧಾರಣೆಯ ಬಗ್ಗೆ ರಚಿಸಿದ ಹಾಡುಗಳ ಸಾಮೂಹಿಕ ಗಾನ. ಒಟ್ಟಿನಲ್ಲಿ ನಮ್ಮದೊಂದು ವಿಚಿತ್ರ ದಾಸ ಕೂಟ.

ಅಂದು ಸಂಜೆ ನವಸಾರಿಯ ಸಭಾಂಗಣದಲ್ಲಿ ಸಾರ್ವಜನಿಕ ಸಭೆ. ಬಾಪೂಜಿ ಯವರೊಡನೆ ದಾಂಡಿಗೆ ನಡೆದಿದ್ದ ಅನೇಕ ವಯೋವೃದ್ಧರನ್ನು ಭೆಟ್ಟಿಯಾಗುವ ಸುಯೋಗ ನಮಗೆ. ಎಂಭತ್ತು, ತೊಂಭತ್ತು ವಯಸ್ಸಾಗಿದ್ದರೂ ದೃಢವಾದ ನಿಲುವು, ತೆಳು ದೇಹ, ಖಾದಿ ಪಂಚೆ, ಜುಬ್ಬಾ, ಗಾಂಧಿ ಟೋಪಿಗಳನ್ನು ಸಮವಸ್ತ್ರ ಗಳಂತೆ ಧರಿಸಿದ್ದ ಆ ಮಹನೀಯರುಗಳನ್ನು ನೋಡುತ್ತಲೇ ಒಂದು ವಿಧವಾದ ಪೂಜ್ಯ ಭಾವನೆ ಮೂಡುತ್ತಿತ್ತು.

ತೊಂಭತ್ತೆರಡು ವಯಸ್ಸಿನ ಚಿಬ್ಬೂ ಭಾಯಿ, ಗಾಂಧೀಜಿಯವರಿಗೆ ದಾಂಡಿ ಯಲ್ಲಿ ಮಾರ್ಗದರ್ಶಿ. ಆತ ತನ್ನ ನೆನಪುಗಳನ್ನು ಗ್ರಾಮ್ಯ ಗುಜರಾತಿಯಲ್ಲಿ ಮೆಲು ಕಾಡುತ್ತಿದ್ದಂತೆ; ರಾಜಮೋಹನ್ ಅದನ್ನು ಇಂಗ್ಲೀಷಿಗೆ ತರ್ಜುಮೆ ಮಾಡುತ್ತಿದ್ದ.

"ಗಾಂಧೀಜಿಯವರ ದಾಂಡಿ ಯಾತ್ರೆ ಸಫಲವಾಗದಿರಲೆಂದು ಪೋಲೀಸರು ದಾಂಡಿಯ ಸಮುದ್ರ ತಟದ ಉಪ್ಪಿನ ನಿಕ್ಷೇಪಗಳ ಮೇಲೆ ಮರಳು ಚೆಲ್ಲಿಸಿದ್ದರು. ಪೋಲೀಸರಿಗೆ ತಿಳಿಯದ ಒಂದು ಜಾಗದಲ್ಲಿ ಉಪ್ಪು ದೊರಕುವುದನ್ನು ನಾನು ಮೊದಲೇ ನೋಡಿಟ್ಟುಕೊಂಡಿದ್ದೆ. ಗಾಂಧೀಜಿಯವರು ದಾಂಡಿಗೆ ನಡೆದು ಬಂದಾಗ, ನಾನು ಅವರನ್ನು ಇದಿರುಗೊಂಡು, ಗೊತ್ತಾದ ಸ್ಥಳಕ್ಕೆ ಕರೆದುಕೊಂಡು ಹೋದೆ. ಬಾಪೂಜಿ ತಮ್ಮ ಕೈಲಿದ್ದ ಕೋಲನ್ನು ನನಗೆ ಹಿಡಿಯಲು ಕೊಟ್ಟು ಅಡಿಯಲ್ಲಿದ್ದ ಉಪ್ಪನ್ನು ತೆಗೆಯಲು ಬಾಗುತ್ತಿದ್ದಂತೆ,

"ಉಪ್ಪೇನಾದರೂ ಸಿಕ್ಕಿತೇ ಬಾಪೂಜಿ ?" ಅಂತ ಕೇಳಿದೆ.

"ನನ್ನ ಹಲ್ಲು ಉಜ್ಜುಕ್ಕೆ ಸಾಕಾಗೋ ಅಷ್ಟು ಸಿಕ್ಕಿದೆ. ನನಗೆ ಉಳಿದಿರೋ ಹಲ್ಲುಗಳೇ ಕಡಿಮೆ, ಗೊತ್ತಲ್ಲ ನಿನಗೆ. ಆದರೆ ಬ್ರಿಟಿಷ್ ಸಾಮ್ರಾಜ್ಯದ ಅಡಿಪಾಯ ಅಲ್ಲಾಡಿಸೋದಕ್ಕೆ ಇಷ್ಟು ಉಪ್ಪುಸಾಕು" ಅಂದರು.

ನನಗೆ ಹೃದಯ ತುಂಬಿ ಬಂತು. ಭಾರತ್ ಮಾತಾ ಕೀ ಜೈ, ಗಾಂಧೀಜೀ ಕೀ ಜೈ ಅಂತ ತುಂಬು ಕೊರಲಿನಿಂದ ಕೂಗಿದೆ. ಅಂದು ಹಾಗೆ ಕೂಗಿದವರಲ್ಲಿ ನಾನೇ ಮೊದಲಿಗ ಎಂಬ ಹೆಮ್ಮೆ ನನಗೆ".

ಚಿಬ್ಬೂಭಾಯಿಯ ವರ್ಣನೆ ಕೇಳುತ್ತಿದ್ದ ವಿಲ್ಲೀ ಡೆಲ್ "you freedom fighters hewn out of solid rock" ಎಂದು ಭಾವಪರವಶರಾಗಿ ನುಡಿದರು.

ಕಪ್ಪು ಅಮೆರಿಕನ್ನರ ನಾಗರಿಕ ಹಕ್ಕುಗಳಿಗಾಗಿ ಹೋರಾಡಿದ ರೆವರೆಂಡ್ ಮಾರ್ಟಿನ್ ಲೂಥರ್ ಕಿಂಗ್ ಜ್ಯೂನಿಯರ್ ಅವರ ಅನುಯಾಯಿಗಳಾದ ಅನೇಕ ಕಪ್ಪು ಜನ, ಅಕ್ಟೋಬರ್ ಎರಡರಂದು ಗಾಂಧೀಜಿಯವರಿಗೆ ಗೌರವ ಸೂಚಿಸಲು ನಮ್ಮ ಯಾತ್ರೆಯಲ್ಲಿ ಭಾಗವಹಿಸಿದ್ದರು. ರೆವರೆಂಡ್ ನೇಥನ್ ಡೆಲ್ ಹಾಗೂ ಅವರ ಪತ್ನಿ ವಿಲ್ಲೀ ಅಂತಹ ಯಾತ್ರಿಗಳು. ತನ್ನ ಬಾಲ್ಯದ ಕಷ್ಟ ಕಾರ್ಪಣ್ಯಗಳು, ಬಿಳಿಯರಿಂದ ತಮಗಾದ ಮಾನಸಿಕ ಹಾಗೂ ದೈಹಿಕ ಹಿಂಸೆಗಳನ್ನು ನೆನೆದರೆ ಇಂದಿಗೂ "A cold wind of hatred sweeps over the landscapes of my heart" ಎಂದು ನೇಥನ್ ಹೇಳುತ್ತಾರೆ.

ನಮ್ಮ ಯಾತ್ರೆಯ ಮುಖ್ಯ ಉದ್ದೇಶ, ನಶಿಸಿ ಹೋಗುತ್ತಿರುವ ಮೌಲ್ಯ ಗಳಾದ ಪ್ರಾಮಾಣಿಕತೆ, ನಿಷ್ಕಳಂಕತೆ, ನಿಸ್ವಾರ್ಥತೆ ಹಾಗೂ ವಿಶ್ವ ಪ್ರೇಮಗಳ ಪ್ರಚಾರ. ಪ್ರಾಮಾಣಿಕತೆಯ ಬಗ್ಗೆ ಕಪ್ಪು ಅಮೇರಿಕನ್ ಪತ್ರಕರ್ತ ಡೇವಿಡ್ ಜೋನ್ಸ್‌ನ ಅನಿಸಿಕೆ.

"ಕಳ್ಳನಿಗೂ ಸಹ ಪ್ರಾಮಾಣಿಕತೆಯ ಅಗತ್ಯ ಇದೆ. ತಾನು ಮಾಡುತ್ತಿರುವ ಕಳ್ಳತನ ನ್ಯಾಯವಾದದ್ದು ಎಂದು ಅವನು ಪ್ರಾಮಾಣಿಕವಾಗಿ ನಂಬದಿದ್ದರೆ ಅವನಿಗೆ ರಾತ್ರೆ ನಿದ್ದೆ ಬರುವುದಾದರೂ ಹೇಗೆ? ನಮ್ಮ ಪ್ರಾಮಾಣಿಕತೆಗೆ ನಮ್ಮ ಅಂತ ರಾತ್ಮನೇ ಸಾಕ್ಷಿ ಎಂದುಕೊಳ್ಳುವವರು ಈ ಬಗ್ಗೆ ಯೋಚಿಸುವುದು ಒಳಿತು".

ರೆಜ್ ಬ್ಲೊ ಆಸ್ಟ್ರೇಲಿಯಾದ ಮೂಲ ನಿವಾಸಿ. ಬಲು ತಮಾಷೆ ಪ್ರವೃತ್ತಿ. ನಾಲ್ಕು ಜನ ಮಕ್ಕಳಂತೆ ಅವನಿಗೆ.

"ಮನೆಯಲ್ಲೂ ಸಹಾ ಇದೇ ರೀತಿ ಮಕ್ಕಳನ್ನ ನಗಿಸುತ್ತಾ ಇರುತ್ತೀಯ ರೆಜ್ ?" ಅಂತ ಕೇಳಿದೆ

"ಅದು ಹೇಗೆ ಸಾಧ್ಯ ಮಹರಾಯ. ಮನೆಯಲ್ಲಿ ಗಂಭೀರವಾಗಿ ಇರುತ್ತೇನೆ. ನಗುತ್ತಾ ಮಕ್ಕಳ ಮುಖ ನೋಡಿದಾಗಲೆಲ್ಲಾ ಅವು ಹಣ ಕೇಳುತ್ತವೆ. ಅಷ್ಟು ಹಣ ನಾನೆಲ್ಲಿಂದ ತರಲಿ ?"

ಹತ್ತು ದಿನಗಳಲ್ಲಿ ಸಬರಮತಿ ಆಶ್ರಮ ತಲುಪಿದೆವು. ವರುಣ ದೇವನ ಕೃಪೆ ಯಿಂದ ತುಂಬಿ ಹರಿಯುತ್ತಿರುವ ಸಬರಮತಿ ನದಿಯ ದಂಡೆಯಲ್ಲಿ ಆಶ್ರಮ. ಗಾಂಧೀಜಿಯವರ ನಾಡಿನಲ್ಲಿ ಸಂಚರಿಸಿ ಸ್ಫೂರ್ತಿ ಪಡೆಯಲು ದೇಶ ವಿದೇಶಗಳಿಂದ ಬಂದಿದ್ದ ನೂರಾರು ಯಾತ್ರಿಗಳೊಡನೆ ಕಲೆತು ಅಂದು ಬೆಳಿಗ್ಗೆ ಎಲ್ಲ ಧರ್ಮಗಳ ಪ್ರಾರ್ಥನೆ. ಕಳೆದ ಹತ್ತು ದಿನಗಳು ಗುಜರಾತಿನ ನಾಗರಿಕರಿಂದ ನಾವು ಪಡೆದ ಆತಿಥ್ಯ. ನೈತಿಕ ಮೌಲ್ಯಗಳ ಬಗ್ಗೆ ಜನಸಾಮಾನ್ಯರು ತೋರಿದ ಕಳಕಳಿ—ಒಟ್ಟಿನಲ್ಲಿ ನಮ್ಮ ಗುಜರಾತ್ ಯಾತ್ರೆ ಒಂದು ಅಪೂರ್ವವಾದ ಬೆಚ್ಚಗಿನ ಅನುಭವ.

20

ಲಕ್ಷ್ಮಣರಾವ್ ಕಾವ್ಯದಲ್ಲಿ ಹಾಸ್ಯ

—ಲಾಫರ್

ನವ್ಯ ಕಾವ್ಯವೆಂದರೆ ತೀರಾ ಗಂಭೀರವಾದ ಸಂಗತಿ, ಅದನ್ನು ಹುಬ್ಬು ಗಂಟಿಕ್ಕಿಕೊಂಡೇ ಓದಬೇಕು ಎಂದು ಬಹಳಷ್ಟು ಜನ ಭಾವಿಸುತ್ತಾರೆ. ಆದರೆ, ಹಾಸ್ಯೇಂದ್ರಿಯ ಉಳ್ಳವರಿಗೆ ನವ್ಯ ಕಾವ್ಯದಲ್ಲೂ ಮುಖ ಅರಳಿಸಲು ಅವಕಾಶ ನೀಡುವಂತಹ ಕವಿತೆಗಳು ಧಾರಾಳವಾಗಿ ಸಿಗುತ್ತವೆ. ನವ್ಯ ಕಾವ್ಯದ ಉಚ್ಛ್ರಾಯ ಕಾಲದಲ್ಲೇ ಅ. ರಾ. ಸೇ. 'ನಗೆ ಮಲ್ಲಿಗೆ' ಎಂಬ ಅಪ್ಪಟ ಹಾಸ್ಯ ಕವಿತೆಗಳ ಸಂಗ್ರಹ ಪ್ರಕಟಿಸಿದ್ದರು. ದಿನಕರ ದೇಸಾಯಿ, ವಿ. ಜಿ. ಭಟ್ಟ, ಅಕಬರ ಅಲಿ ಮತ್ತು ಬಿಳಿಗಿರಿ ಅವರು ಕಚಗುಳಿ ಇಡುವ ಪದ್ಯಗಳನ್ನೂ, ಚುಟುಕುಗಳನ್ನೂ ರಚಿಸಿದ್ದರು. ಅಷ್ಟೇಕೆ? ನವ್ಯದ ನೇತಾರರೆನಿಸಿದ ಅಡಿಗರ ಕವಿತೆಗಳಲ್ಲೇ ವ್ಯಂಗ್ಯ, ವಿಡಂಬನೆ. ವಕ್ರೋಕ್ತಿ. ಹೋಲಿಕೆಗಳು ಎಂತಹ ಹರಳೆಣ್ಣೆ ಮುಖಗಳನ್ನೂ ಅರಳಿಸುವಷ್ಟು ಪರಿಣಾಮಕಾರಿಯಾಗಿವೆ. ಅವರೊಂದಿಗೆ ನಿಸಾರ್, ನಾಡಿಗ, ಜಿ. ಎಸ್. ಎಸ್., ಚಂಪಾ. ಪಾ ವೆಂ., ಮುಂತಾದವರು ತಮ್ಮ ನವ್ಯ ಕವಿತೆಗಳಿಗೆ ಸಾಕಷ್ಟು ಹಾಸ್ಯದ ಮೆರಗು ಕೊಟ್ಟಿದ್ದಾರೆ.

ಇಷ್ಟಾಗಿಯೂ ನವ್ಯಕಾವ್ಯ ಅತ್ಯಂತ ಗಂಭೀರ ಎಂಬ ತಪ್ಪು ಕಲ್ಪನೆ ಮೂಡಲು ಕಾರಣರಾರು? ನವ್ಯ ಕಾವ್ಯದ ಇತರ ಲಕ್ಷಣಗಳನ್ನೇ ಹೈ ಲೈಟ್ ಮಾಡಿ, ಅಲ್ಲಿದ್ದ ವಿನೋದವನ್ನು 'ಲೋ ಲೈಟ್' ಮಾಡಿದ ನವ್ಯ ವಿಮರ್ಶಕರೇ ಅಥವಾ ಗೋಷ್ಠಿಗಳಲ್ಲಿ ಹ್ಯಾಪು ಮೋರೆ ಹಾಕಿಕೊಂಡು, ಆಕಾಶ ನೋಡಿಕೊಂಡು, ಹೇಳಿದ್ದನ್ನೇ ಹೇಳುವ ಕಿಸುಬಾಯಿ ದಾಸರಂತೆ ಒಣ ಕವಿತೆಗಳನ್ನು ಓದುವ 'ಅತಿ ನವ್ಯ' ಕವಿಗಳೆ? ಎಂಬುದು ಚರ್ಚಾಸ್ಪದ (ಪಿ. ಎಚ್. ಡಿ. ಪ್ರಿಯರಿಗೆ ರಿಸರ್ಚಾಸ್ಪದ) ವಿಚಾರ, ಅದೇನೇ ಇರಲಿ, ಈ ಬಗೆಯ ಅತಿ ನವ್ಯ ಕವಿಗಳು ತಮ್ಮ ಒಣ ಗಾಂಭೀರ್ಯದ ಸೋಗಿನಿಂದಾಗಿ ಜನ ಸಾಮಾನ್ಯರ ದೃಷ್ಟಿಯಲ್ಲಿ ಹಾಸ್ಯಾಸ್ಪದರಾಗತೊಡಗಿದ್ದು ಸುಳ್ಳಲ್ಲ.

ತರುಣ ಪೀಳಿಗೆಯ ನವ್ಯ ಕವಿಗಳಲ್ಲಿ ಹಾಸ್ಯವನ್ನು ಅತ್ಯಂತ ಪರಿಣಾಮಕಾರಿಯಾಗಿ ಬಳಸಿಗೊಂಡವರು ಬಿ. ಆರ್. ಲಕ್ಷ್ಮಣರಾವ್. ಈ ಕವಿಯ ಮೊದಲ ಸಂಕಲನವಾದ 'ಗೋಪಿ ಮತ್ತು ಗಾಂಡಲೀನ' ಹಿಡಿದು ಇತ್ತೀಚಿನ 'ಶಾಂ–ಗ್ರಿಲಾ'ದ ತನಕ

ಎಲ್ಲ ಸಂಕಲನಗಳಲ್ಲೂ ಇವರ ಹಾಸ್ಯ ಪ್ರಜ್ಞೆಯನು ಎತ್ತಿತೋರಿಸುವಂತಹ ಹಲವು ಕವಿತೆಗಳಿವೆ. ಲಕ್ಷ್ಮಣರಾವ್ ಕಾವ್ಯದ ಅನನ್ಯತೆ ಇರುವುದೇ ಅವರ ತಿಳಿಹಾಸ್ಯದ ಧಾಟಿಯಲ್ಲಿ. ಇದನ್ನು ಒಣ ವಿಮರ್ಶೆಯ ಶಬ್ದಗಳಲ್ಲಿ 'weವರಿಸುವುದಕ್ಕಿಂತ, ನೀವೇ ಅನುಭವಿಸಿ ಎಂದು ತೆರೆ ಸರಿಸುವುದೇ ಮೇಲಲ್ಲವೆ ? ಇಗೊಳ್ಳಿ :

'ಬೇರರ್, ಗೋಪಿಗೆ ಕುರಿಕಾಲಿನ ಸೂಪು
ಕೋಳಿ ಬಿರಿಯಾನಿ' ಅಂದ್ರೆ
'ನಂಗೊಂದ್ಲೋಟ್ ಥಂಡಾ ಪಾನಿ' ಅಂತಾನೆ,
'ಗುಂಡು ಹಾಕೋ, ಗೋಪಿ' ಅಂದ್ರೆ
'ನಂಗೆ ಸಾಕಪ್ಪ ಕಾಫಿ' ಅಂತಾನೆ,
ಗುಂಡಾಮೃತ ಬಂದ ಕೂಡಲೇ
ಹಿಂದಾ ನೋಡದೆ ಓಡುತ್ತಾನೆ
ಒಂದಾ ಮಾಡಲೆಂದು ಬಾತ್ರೂಮಿಗೆ
ಜನಿವಾರದ ಲೋಲಾಕು ಧರಿಸಿ......

ಇಂಥ ಗೋಪಿಯ ಎದುರು ಕಾಬರೆ ನರ್ತಕಿ 'ಗುಂಡು ಗುಂಡು ಗಾಂಡಲೀನ ಕ್ಯಾಬರಿಸುತ್ತಾ ತನ್ನ ಅಂಗೋಪಾಂಗಗಳನ್ನು ತಾನೆ ನೇವರಿಸುತ್ತಾ, ನಿಧ ನಿಧಾವಾಗಿ, ವಿಧ ವಿಧಾನವಾಗಿ...' ಬತ್ತಲರಾದಾಗ ಅವನ ಪರಿಸ್ಥಿತಿ :

ಗಾಂಡಲೀನಳ ಬಾಂಡಲೆ ಕಣ್ಣುಗಳಲ್ಲಿ
ಹಳ್ಳ ದಿಣ್ಣೆಗಳಲ್ಲಿ
ಕೊತ ಕೊತ ಕುದಿಯುವ ಕಾಮದ ಎಣ್ಣೆ ಬೆಣ್ಣೆಗಳಲ್ಲಿ
ಬುರ ಬುರ ಊದಿ ಗಿರಗಿರ ತಿರುಗುವ
ಬೋಂಡವಾದ ಗೋಪಿ...

ಉದ್ದಕ್ಕೂ ಹೀಗೆ ಒದ್ದಾಡಿದ ಪಾಪದ ಗೋಪಿ, ಕ್ಯಾಬರೆ ನರ್ತಕಿಯ 'ಮಾನ ನಡುವಿನ ಗಡಿಯನ್ನು ಮೀರಿ, ಜಾರಿದಂತಾದಾಗ,' ಥಟ್ಟನೆ 'ಹಾ ವೆಂಕಟಲಕ್ಷ್ಮಿ' ಎಂದು ಧರ್ಮಪತ್ನಿಯನ್ನು ನೆನೆದು 'ಪರನಾರೀ ಸಹೋದರ' ಎನಿಸಿಕೊಳ್ಳುತ್ತಾನೆ.

(ಕವಿತೆ—ಗೋಪಿ ಮತ್ತು ಗಾಂಡಲೀನ)

ಅಮೇರಿಕಾದವರು ಮೊದಲಬಾರಿಗೆ ಚಂದ್ರ ಲೋಕಕ್ಕೆ ಹೋದ ಬಗ್ಗೆ 'ಶಶಿಯ ಮೊರೆ' ಎಂಬ ಕವಿತೆಯಲ್ಲಿ ಲಕ್ಷ್ಮಣರಾವ್,

"ಲೇ ಶಶೀ, ಬರೀ ಐಸ್‌ಕ್ರೀಂನಲ್ಲೇನಿದೆಯೆ ಖುಷಿ ?
ಹಸಿಹೆಣ್ಣೆ, ಓಡಿ ಈ ಅಮೇರಿಕದ ಕಾಕ್‌ಟೇಲ್ ಕುಡಿ"

ಎನ್ನುತ್ತಾ, ಕೊನೆಯಲ್ಲಿ

ನನ್ನ ಕ್ಷೇತ್ರದಲ್ಲೂ ನಿಮ್ಮ ಧ್ವಜ ನೆಟ್ಟು
ನನ್ನ ಬಸಿರಲ್ಲೂ ಒಂದು ವಿಯೆಟ್ನಾಂ ಬಿತ್ತಬೇಡಿ

ಎಂಬ ಶಶಿಯ ಮೊರೆಯೊಂದಿಗೆ ಕವಿತೆ ಮುಗಿಸುತ್ತಾರೆ.

'ನನ್ನೂರು' ಎಂಬ ಕವಿತೆಯಲ್ಲಿ ಈ ಕವಿ ಕಂಡದ್ದು ;

ಇಲ್ಲಿ ವ್ಯಾಪಾರಿಗಳೇ ಹೆಚ್ಚು,
ಮೂಮೂಲಿನಂತೆ ಇವರಿಗೆ ಹಣದ ಹುಚ್ಚು ;
ಆದರೂ ನನಗಿವರು ಅಚ್ಚುಮೆಚ್ಚು ;
ಯಾಕೆಂದರೆ ಇವರ ಜೀವನ ಅದೆಷ್ಟು ಅರ್ಥಪೂರ್ಣ...
ಇಲ್ಲಿ ಹೊತ್ತು ಹೋಗುವುದು ಸುಲಭ ಹೊತ್ತರೆ
ಬದುಕು ಮತ್ತೂ ಸುಲಭ ಸತ್ತರೆ...

'ಪ್ರೇಮ (ಧೂಮ) ಗೀತೆ' ಯಲ್ಲಿ ಸಿಗರೇಟನ್ನು ಪ್ರೇಯಸಿಯ ಜತೆ ತರ್ಕಬದ್ಧವಾಗಿ ಹೋಲಿಸುತ್ತಾ—

ಸಿಗರೇಟು ಸುಡುತ್ತೆ, ನೀನೂ ಸಹ ;
ಆದರೂ ಎಂಥ ಸುಖ !...
ಹಿರಿಯರ ಸಮ್ಮುಖದಲ್ಲಿ, ಪವಿತ್ರ ಪರಿಸರದಲ್ಲಿ,
ಧಾರ್ಮಿಕ ವಾತಾವರಣದಲ್ಲಿ ಸೀಗರೇಟು ಸಿಷಿದ್ಧ.
ನಮ್ಮ ಪ್ರೇಮವೂ ಹೀಗೆಯೇ, ಮಡಿವಂತಕೆಯ ವಿರುದ್ಧ...
ಮಧ್ಯಮ ವರ್ಗದ ನನಗೆ
ನಿಜವಾದ ಪ್ರೇಮ ಸಿಗರೇಟಿನಂತೆ ದಿನದಿನಕ್ಕೂ ತುಟ್ಟಿ...

ಎಂದು ಈ ಕವಿ ಬೇಸರದ ಹೊಗೆಯ ನಡುವೆಯೂ ನಗಬಲ್ಲರು, ನಮ್ಮನ್ನು ನಗಿಸಬಲ್ಲರು.

ಸುಬ್ಬಾ ಭಟ್ಟರ ಮಗಳೆ
ಇದೆಲ್ಲಾ ನಂದೇ ತಗೊಳ್ಳೆ

ಎಂದು ಲಕ್ಷ್ಮಣರಾವ್ ತನ್ನ ಪತ್ನಿಗೆ ನೀಡುವುದು ಏನು ಗೊತ್ತಾ ?

'ನೀಲಿ ನೈಲಕ್ಸಿನ ಮೇಘ ವಿನ್ಯಾಸದ ಆಕಾಶದ ಸೀರೆ'...
'ರಾತ್ರಿ ತೆರೆವುದು, ಅದೂ ನನ್ನದೆ
ಜಿಗಿ ಜಿಗಿ ಜ್ಯುಯಲ್ಲು ಸ್ಟೋರು
ಯಾವುದು ಬೇಕೋ ಕೋರು
ಚಿಕ್ಕೆ ಮೂಗುತಿಗೆ, ಚಂದ್ರ ಪದಕಕ್ಕೆ, ನೀ ಹಾರಿಕೆ ಹಾರ
ನನ್ನ ಸಂಪತ್ತೆಷ್ಟು ಅಪಾರ...

(ಕವಿತೆ ; ರಗಳೆ)

ಎಂಥ ಮಜವಾದ ಕಲ್ಪನೆ ! ಕೇಳಿದರೆ ಲಟ್ಟಣಿಗೆ ಹಿಡಿದ ಮಡದಿಯೂ ಥಟ್ಟನೆ ಮುಗಳ್ನಗಬೇಕು. ಅಲ್ಲವೆ ? ಕೆಲವೊಮ್ಮೆ ಕೇವಲ ಪ್ರಾಸದಿಂದಾಗಿಯೇ ಇವರ ಕವಿತೆ ಖುಷಿ ಕೊಡುತ್ತೆ.

ಭಾರತದ ಜನಕೋಟಿಯ ಶೇಕಡಾ ತೊಂಬತ್ತರಲ್ಲಿ ಒಬ್ಬನೇ
ಕರಿಯನೇ ಕ್ಯಾತನೇ ಅಥವಾ ಅರೆಹೊಟ್ಟೆ ಸುಬ್ಬನೇ
ಭಾರತದ ಅಕ್ಷಿಯೇ, ನಿರಕ್ಷರ ಕುಕ್ಷಿಯೇ...

(ಕವಿತೆ : ನಿರಕ್ಷರ ಕುಕ್ಷಿಗೆ)

ಕೂತಕಡೆ ಕೂತು ಹಣ ಗಳಿಸುವ ಸೆಟ್ಟರ,
ಶ್ರಾದ್ಧದೂಟದ ಕಮಟ ಜನಿವಾರದ ಭಟ್ಟರ
ಉರ್ಧ್ವನೋಟದ. ಸ್ಥಿತ ಪ್ರಜ್ಞ ಕವಿಲಟ್ಟರ...

(ಕವಿತೆ : ಬೊಜ್ಜು)

'ವಾ–ನರಗೀತೆ' ಎಂಬ ಕವಿತೆ ಅಂತ್ಯದಲ್ಲಿ 'ವಿಕಾಸದ ನಿಚ್ಚಣಿಕೆಗೆ ಇನ್ನೆಷ್ಟೋ ಇವೆ ಮೆಟ್ಟಲು ನರನಾಗಿ ನಿಂತರೆ ಸಾಕೆ ? ಎಂಬ ಗಂಭೀರ ಪ್ರಶ್ನೆಯನ್ನೇ ನಮ್ಮ ಮುಂದಿಡುತ್ತದಾದರೂ ಪ್ರಾರಂಭದಲ್ಲಿ ಹೀಗೆ ತಮಾಷೆಯಾಗಿಯೇ ಸಾಗುತ್ತದೆ.

ಕೋತಿಗಳಲ್ಲೂ ಗುಂಪುಗಾರಿಕೆ, ಘರ್ಷಣೆಗಳಿವೆ
    ನಮ್ಮ ಕಾಲೇಜಿಗರಂತೆ.
ಆದರೆ. ಸುದೈವಕ್ಕೆ, ಈ ಕಪಿಗಳಲ್ಲಿಲ್ಲ
    ಚಾಕು, ಚೈನ್, ಚೂರಿ ಬಳಕೆ

ಇನ್ನೂ ಕೆಲವು ಉದಾಹರಣೆಗಳು :

ಈ ಕಡೆ ಕಾಲೇಜು ಹುಡುಗಿ ರಾಧೆ
ಚರಿತ್ರೆ ಪುಸ್ತಕದಲ್ಲಿ ಕಣ್ಣು
ರೇಡಿಯೋ ಹಾಡಿನಲ್ಲಿ ಕಿವಿ
ಹಗಲುಗನಸಿನಲ್ಲಿ ಮನಸ್ಸು
ತಬ್ಬಿಬ್ಬು ವಯಸ್ಸಿನ ಬಾಧೆ...

(ಕವಿತೆ : ಬಯಲು)

ಸರ್ಕಾರ ಎಂದರೆ ಉಷ್ಟ್ರಪಕ್ಷಿ, ಪತ್ರಿಕೆ ಬರಿ ಟೀಕೆ
ವಿರೋಧ ಪಕ್ಷ ಮುದಿ ಪತಿವ್ರತೆ. ಪೋಲೀಸರೆಂದರೆ ಜೋಕೆ
ಚುನಾವಣೆ ಕಣ್ಣೊರಿಸುವ ಕರ್ಚೀಪು, ಆಶ್ವಾಸನೆ ಆಪದ್ಧರ್ಮ
ತೆರಿಗೆ ಶಾಸನಬದ್ಧ ಸುಲಿಗೆ. ಬವಣೆ ನಮ್ಮ ಕರ್ಮ

(ಕವಿತೆ ಒಂದು ಹಿತವಚನ)

ಈ ಬಗೆಯ ಸಾಲುಗಳನ್ನು ಕವಿ ಕೇವಲ ಹಾಸ್ಯಕ್ಕಾಗಿ ಬರೆದಿಲ್ಲ ಕವಿತೆಯನ್ನು ಇಡಿಯಾಗಿ ಓದಿದಾಗ ಹಾಸ್ಯದ ಹಿಂದಿರುವ ಆಳವಾದ ವಿಷಾದ, ಬದಲಾವಣೆಗೆ ಹಾತೊರೆಯುವ ಕವಿಯ ಮನಸ್ಸು ಓದುಗನನ್ನು ಮತ್ತೆ ಮತ್ತೆ ಕಾಡುತ್ತದೆ. ಇಡಿಗವನಗಳೆಲ್ಲ ನಗೆಗಾಗಿಯೇ ಲಕ್ಷ್ಮಣರಾವ್ ಹಲವಾರು ಚುಟುಕು. ಹನಿಗವನಗಳನ್ನು ರಚಿಸಿದ್ದಾರೆ. ವಿವಿಧ ಪತ್ರಿಕೆಗಳ ಮೂಲೆಗಳಲ್ಲಿ, ವಿಶೇಷಾಂಕಗಳನ್ನು ಮಿನುಗುತ್ತಿದ್ದ ಈ (ಚಿಂತಾ) ಮಣಿ (!) ಕವನಗಳು (ಈ ಕವಿಯ ಊರು ಚಿಂತಾಮಣಿ) ಅದೇಕೋ ಇವರ ಕವನ ಸಂಗ್ರಹಗಳಲ್ಲಿ ಸೇರಿಕೊಂಡಿಲ್ಲ ! 'ಲಿಲ್ಲಿಪುಟ್ಟಿಯ ಹಂಬಲ' ಎಂಬ ಸಂಕಲನದಲ್ಲಿ ಸೇರಿರುವ 13 ಹನಿಗವನಗಳಲ್ಲಿ ಆಯ್ದ ಕೆಲವನ್ನು ಇಲ್ಲಿ ಉಲ್ಲೇಖಿಸುತ್ತಿದ್ದೇನೆ—

ವ್ಯವಹಾರ :

ರತ್ನಯ್ಯ ಸೆಟ್ಟರು
ಕಂಡು ಕಂಗೆಟ್ಟರು :
ಅವರ ಮಗಳು ಕನವಲ್ಲಿ
ಗುಮಾಸ್ತ ಶ್ಯಾಮ ಭಟ್ಟನ ತೋಳ ತೆಕ್ಕೆಯಲ್ಲಿ
ರತ್ನಯ್ಯ ಸೆಟ್ಟರು ಅಂದಿನಿಂದ ಶ್ಯಾಮ ಭಟ್ಟನಿಗೆ
ಸಂಬಳ ನಿಲ್ಲಿಸಿ ಬಿಟ್ಟರು.

ನೋಡಿದಿರಾ...?

ಬೆಲೆಗಳೇರುತಿವೆ ನೋಡಿದಿರಾ ?
ಬಡವನ ಬಾಗಿದ ಬೆನ್ನನ್ನು ಮೆಟ್ಟಿ,
ನಡುವರ್ಗದ ಸುಡು ನೆತ್ತಿಯ ಮೆಟ್ಟಿ,
ಸಿರಿವಂತನ ಬೀಗಿದ ಎದೆ ತಟ್ಟಿ
ಬೆಲೆಗಳೇರುತಿವೆ ನೋಡಿದಿರಾ ?

ಚಿತ್ರ

ಗದ್ದೆಯ ಒದ್ದೆ ನೆಲದಲ್ಲಿ
ಬಗ್ಗಿ ಕಳೆ ಹೆಕ್ಕುತಿರುವ
ಬಣ್ಣ ಬಣ್ಣದ ಕೊಕ್ಕರೆ ಸಾಲು
ಹಲವು ಹೆಣ್ಣಾಳು

ಗುಟ್ಟು

ಕೆಂಪು ದೀಪಕ್ಕೆ
ಏನೆಲ್ಲಾ ಅರ್ಥಗಳಿರಬಹುದು
ಅಪಾಯ, ನಿಲ್ಲು, ಸೂಳೆಗಾರಿಕೆ ಇತ್ಯಾದಿ
ಆದರೆ
ನಮ್ಮ ಬೆಡ್ರೂಮಿನಲ್ಲೂ
ಕೆಂಪು ದೀಪವಿದೆ

ಕುಣಿಯುತ್ತ ಬರುವ ಪದಗಳು, ಹೊಸದೆನ್ನಿಸುವ ಪ್ರಾಸಗಳು, ತುಂಟತನ, ಹಿತವಾದ ಪೋಲಿತನ, ಗಾಢ ವ್ಯಂಗ್ಯ, ಸೂಕ್ಷ್ಮವಾದ ಹಾಸ್ಯ... ಹೀಗೆ ಒಳ್ಳೆಯ ವಿನೋದದ ಎಲ್ಲ ಗುಣಗಳನ್ನು ಈ ಕವಿ ತಮ್ಮ ಹಲವು ಹನಿಗವನ, ಚುಟುಕುಗಳಲ್ಲಿ ತೋರಿಸಿದ್ದಾರೆ ಇನ್ನಾದರೂ ಲಕ್ಷ್ಮಣರಾವ್ ತಮ್ಮ ಪುಟ್ಟ ಪದ್ಯಗಳನು ಪುಸ್ತಕ ರೂಪದಲ್ಲಿ ಸಂಗ್ರಹಿಸುತ್ತಾರೆ ಎಂದು ಹಾರೈಸೋಣ.


— ಲಾಫರ್

ಕೋಪ ಶಮನ

—ಎಂ. ವಿ. ಸೀತಾರಾಮಯ್ಯ

ಕೋಪ ಬರುವುದು ಸಹಜ; ಅದ ತಡೆವುದತಿ ಕಷ್ಟ ;
ಕೋಪಾಗ್ನಿ ಭುಗಿಲೆದ್ದು ಸುಡುವ ಮುನ್ನ
ಮಡದಿಯನು ಕರೆದು ದುರದುರನೆ ನೋಡಿ ಬಡಿಸೆನ್ನು,
ಜಠರಾಗ್ನಿಗೊಂದಿಷ್ಟು ಹಾಕು ಅನ್ನ.

ಮಾಡು ಕಂಡಾಗ ಕಂಡಲ್ಲಿ ಅಧಿಕಾರಿಗೆ
ಸೊಂಟ ಬಗ್ಗಿಸಿ ಮೂರು ಸಲ ಸಲಾಮು ;
ನಿನ್ನ ತಪ್ಪುಗಳೆಷ್ಟೊ ಬಲ್ಲೆಯಾ ನೀನು ? ಅವನ
ಕೋಪ ಶಮನಕ್ಕದೇ ಒಳ್ಳೆಯ ಮುಲಾಮು.



ಇನ್ಮೇಲೆ ನಮ್ಮ ಟೆಸ್ಟ್ ಮ್ಯಾಚ್‌ಗಳನ್ನೆಲ್ಲಾ
ಬಂಗ್ಲಾ ದೇಶದ ವಿರುದ್ಧಾನೆ ಆಡ್ಬೇಕು.

ಒಂದು ನೀತಿಯ ಕಥೆ

—ಶಿವು

ಮೊನ್ನೆ ನನ್ನ ತಮ್ಮನ ಮನೆಗೆ ಹೋಗಿದ್ದೆ. ಅಂದು ಅವನ ಮಗನ ಮುಂಜಿ. ಬೆಳಗಿನ ಸಮಾರಂಭವೆಲ್ಲಾ ಮುಗಿದು, ಸಂಜೆ ಊಟ ಮುಗಿಯುವ ಹೊತ್ತಿಗೆ ಡ್ರಾಯಿಂಗ್ ರೂಮಿನಲ್ಲಿ ಮಕ್ಕಳ ಪಟಾಲಂ ಜಮಾಯಿಸಿತ್ತು. ಮಹಿಳಾ ವರ್ಗದವರೆಲ್ಲಾ ಎಲೆ ಅಡಿಕೆಯೊಂದಿಗೆ ಅವರಿವರ ವಿಷಯಗಳನ್ನುಮೆಲ್ಲುತ್ತಾ, ಊಟದ ಮನೆಯಲ್ಲಿ ಬೀಡು ಬಿಟ್ಟಿದ್ದರು. ಮಕ್ಕಳೆಲ್ಲಾ ಗಲಾಟೆ ಮಾಡುತ್ತಿದ್ದುದನ್ನು ನೋಡಿ ನನ್ನ ತಮ್ಮ,

"ನೀವೆಲ್ಲಾ ಸುಮ್ಮನಿದ್ದರೆ ಒಂದು ಕಥೆ ಹೇಳ್ತೀನಿ" ಅಂದ.

"ಕಥೆ. ಕಥೆ" ಎಂಬ ಸುದ್ದಿ ಮಕ್ಕಳ ಗುಂಪಿನಲ್ಲೆಲ್ಲಾ ಹರಡಿ ಎಲ್ಲರೂ ಕಥೆ ಕೇಳುವ ಉತ್ಸುಕತೆಯಿಂದ ಸುಮ್ಮನಾದರು.

ಕಥೆ ಶುರುವಾಯಿತು—

"ತಿಪ್ಪಾಪುರಿ ಅಂತ ಒಂದು ಊರು. ಅಲ್ಲಿ ಒಬ್ಬ ಬಡ ಬ್ರಾಹ್ಮಣ ಇದ್ದ. ಅವನ ಹೆಸರು ಶಾಮಾಭಟ್ಟ. ಏನು ಅವನ ಹೆಸರು ?"

"ಶಾಮಾಭಟ್ಟ" ಎಂದಿತು ಮಕ್ಕಳ ಹಿಮ್ಮೇಳ.

"ಹೂಂ. ಶಾಮಾಭಟ್ಟ. ಅವನು ಎಷ್ಟು ಬಡವಾ ಅಂದ್ರೆ ಹೇಳುಕ್ಕಾಗುಲ್ಲ. ಮನೇಲಿ ಯಾವ ಸಾಮಾನು ಇರಲಿಲ್ಲ. ಬಟ್ಟೆ ಎಲ್ಲಾ ಹರಕು. ಬಾಗಿಲೆಲ್ಲಾ ಸೀಳು ಬಿಟ್ಟಿತ್ತು. ಬಾಗಿಲಿಗೆ ಬೀಗಾನೇ ಇರಲಿಲ್ಲ. ಮನೆ ಒಳಗೆ ಒಂದು ಬಿಡಿ ಕಾಸೂ ಇಲ್ಲದಿದ್ದಮೇಲೆ ಬೀಗ ಯಾಕೆ, ಅಲ್ವೇ ?

ಹೀಗಿದ್ದಾಗ ಒಂದಿನ ಪಕ್ಕದಮನೆ ಭೀಮಾ ಜೋಯಿಸ ಶಾಮಾಭಟ್ಟನ ಮನೆಗೆ ಬಂದ.

"ಶಾಮಾ ಭಟ್ಟ, ಶಾಮಾಭಟ್ಟ. ನಮ್ಮನೆಯೋರ ಜೊತೆ ನಾನು ಎರಡು ದಿನ ಊರಿಗೆ ಹೋಗ್ತಾ ಇದೀನಿ. ಮನೇಲಿ ಯಾರೂ ಇರುಲ್ಲ. ನಮ್ಮ ಮನೇಲಿರೊ ಪಾತ್ರೆ, ಒಡವೆ ಎಲ್ಲಾ ನಿಮ್ಮ ಮನೇಲಿ ಎರಡು ದಿನದ ಮಟ್ಟಿಗೆ ಇಟ್ಟಿರೋಣವೇ "? ಅಂತ ಕೇಳಿದ.

ಶಾಮಾ ಭಟ್ಟ ಏನೂ ಯೋಚನೆ ಮಾಡದೆ "ಆಗಲಿ ಜೋಯಿಸ್ರೆ, ಅದಕ್ಕೇನು" ಅಂದು ಬಿಟ್ಟ.

ಒಡವೆ, ಪಾತ್ರೆ, ಎಲ್ಲಾ ಶಾಮೊಭಟ್ಟನ ಮನೆಗೆ ಬಂತು.

ರಾತ್ರಿ ಕಳೆಯಿತು,

ಬೆಳಗ್ಗೆ ಎದ್ದು ನೋಡಿದರೆ ಮನೆ ಬಾಗಿಲು ತೆರದಿದೆ. ಪಾತ್ರೆ, ಒಡವೆ ಎಲ್ಲಾ ಮಾಯ, ಭಟ್ಟನಿಗೆ ಗಾಬರಿ. ಯಾರೋ ಕಳ್ಳರು ಎಲ್ಲಾ ಲಪಟಾಯಿಸಿ ಬಿಟ್ಟಿದ್ದಾರೆ. ಜೋಯಿಸನಿಗೆ ಏನು ಉತ್ತರ ಹೇಳೋದು ? ಏನೂ ತೋಚದೆ ಶಾಮಾ ಭಟ್ಟ ಅಳುಕ್ಕೆ ಶುರುಮಾಡಿದ.

"ಸಾಕು ನಿಲ್ಸೋ ನಿನ್ನ ಅಸಂಬಂದ್ಧ ಪ್ರಲಾಪಾನ" ನಾನು ಮಧ್ಯ ಬಾಯಿ ಹಾಕಿದೆ.

"ಯಾಕೆ ಹಾಗ್ಹೇಳ್ತಿಯ ?"

"ಅಲ್ರೋ ಶಾಮಾಭಟ್ಟನಿಗೆ ಅಷ್ಟು ಜ್ಞಾನ ಇರುಲ್ವೇ ಒಡವೆ, ಪಾತ್ರೆ ಮನೆಗೆ ಬಂದ ತಕ್ಷಣ, ಮನೆ ಬಾಗಿಲಿಗೆ ಬೀಗ ಹಾಕಿಸ್ದೇ ಇರ್ತಾನ್ಯೆ ? ಒಂದು ವೇಳೆ ಬೀಗ ಹಾಕಿಸುಕ್ಕೊ ಹಣ ಇಲ್ದೆ ಇದ್ರೆ, ಜೋಯಿಸನ ಹತ್ರ ಸಾಲ ಇಸ್ಕೊಂಡಾದ್ರೂ ಬೀಗ ಹಾಕಿಸ್ತಿದ್ದ. ನಿನ್ನ ಕಥೇಲಿ ನೈಜತೇನೆ ಇಲ್ಲವಲ್ರೊ ? "

"ಇವತ್ತಿನ ಬೆಳಿಗ್ಗೆ ಪೇಪರ್ ಓದಿದ್ಯ ? ತಿಪ್ಪಗೊಂಡನಹಳ್ಳಿ ಕೆರೇಲಿ ನೀರಿಲ್ಲಾ ಅಂತ ನಾಲ್ಕು ವರ್ಷದಿಂದ ಕಣ್ಣೀರು ಸುರಿಸಿ ನೀರು ತುಂಬಿಸ್ತಿದ್ದರಲ್ಲಾ

ನಮ್ಮ ನೀರು ಸರಬರಾಜು ಇಲಾಖೆಯೋರು. ಮೊನ್ನೆ ಭಾರಿ ಮಳೆ ಬಂದು ಕೆರೆ ತುಂಬಿ, ಉಕ್ಕಿ ಹರಿದು ಹೆಚ್ಚುವರಿ ನೀರನ್ನು ಹೊರಕ್ಕೆ ಬಿಡಲು ತೂಬಿನ ಬಾಗಿಲುಗಳನ್ನು ತೆರೆದರಂತೆ. ಪುನಃ ಬಾಗಿಲುಗಳನ್ನು ಮುಚ್ಚುಕ್ಕೇ ಆಗಲಿಲ್ಲ. ನಾಲ್ಕು ತಿಂಗಳಿಗೆ ಆಗೋ ಅಷ್ಟು ನೀರು ಎರಡೇ ದಿನಗಳಲ್ಲಿ ಕೊಚ್ಚಿಕೊಂಡು ಹೊಯ್ತು. ಬಾಗಿಲುಗಳನ್ನು ಮಳೆ ಬರೋಕ್ಕೇ ಮುಂಚೇನೇ ಒಳ್ಳೇ ದುರಸ್ತಿನಲ್ಲಿ ಇಟ್ಟುಕೊಳ್ಳುವುದಕ್ಕೆ ಅವ್ರಿಗೆ ಏನಾಗಿತ್ತು ? ಮಳೆ ಬರೋದು ಗೊತ್ತಿರಲಿಲ್ವಾ ? ಮೂರು ವರ್ಷಗಳಿಂದ ಬಾಗಿಲುಗಳು ಒಣಗ್ತಾ ಬಿದ್ದಿದ್ವು. ಅಷ್ಟರಲ್ಲಿ ರಿಪೇರಿ ಮಾಡಿಸಿ, ಬಾಗಿಲುಗಳನ್ನು ದಿನಕ್ಕೊಂದು ಸಾರ್ತಿ ಹಾಕಿ ತೆಗೆದಿದ್ರೊ ಆಗ್ತಿತ್ತು. ಅಥವಾ ನೀರು ಬರುಲ್ಲ, ರಿಪೇರಿ ಖರ್ಚು ಯಾಕೆ ಅಂತ ಸುಮ್ಮನಾಗಿದ್ರೊ. ಅಂತೂ ಈ ಇಂಜಿನಿಯರುಗಳಿಗೂ ಶಾಮಾ ಭಟ್ಟನಿಗೂ ಏನು ವ್ಯತ್ಯಾಸ ?

ನನ್ನ ತಮ್ಮನ ಖಾರದ ದನೀಲಿ, ನಾಲ್ಕು ತಿಂಗಳ ನೀರಿನ ಶೇಖರಣೆ ವ್ಯರ್ಥ ಮಾಡುದರ ಬಗ್ಗೆ ನೋವಿನ ಛಾಯೆ ಇತ್ತು.

"ಅದೂ ಸರಿ ಅನ್ನು" ಅಂತ ಅಮಾಯಕ ಉತ್ತರ ನೀಡಿ ಸುಮ್ಮನಾದೆ.

* * *

ಹಲ್ಲು ಮತ್ತು ಕಡಲೆ

—ಶಾಂತಾ ರಘು

ಶಂಕರ ಸುಬ್ಬುಕೃಷ್ಣರಾಯರಿಗೆ ಜೀವನದಲ್ಲಿ ಬಲು ಬೇಸರ ಬಂದು ಬಿಟ್ಟಿತ್ತು. S.S.K. ರಾಯರ ಪರಿಚಯವಿದ್ದವರು ಹುಬ್ಬೇರಿಸಬಹುದು. ಏನು ? ಬೆಂಗಳೂರು ಮಹಾ ನಗರದ ಮಹಾ ಶ್ರೀಮಂತರು—palace orchard ನಲ್ಲಿ palace ನಂಥ ಬಂಗಲೆ, ಗೇಟಿನಲ್ಲಿ ಘೂರ್ಖಾ, ವರಾಂಡದಲ್ಲಿ ವಾಚ್‌ಮೇನ್, ಆರ್ಭಟಿಸುವ ಅಲ್‌ಸೇಷಿಯನ್, ಪೆಟ್ ಮಾಡಲು ಪಾಮರೇರಿಯನ್, ಅಮ್ಮಾವರಿಗೆ ಅಂಬಾಸಿಡರ್, ಸಾಹೇಬರಿಗೆ ಸ್ಟಾಂಡರ್ಡ್ 2000, ಮಕ್ಕಳಿಗೆ ಮಾರುತಿ,—ಹೀಗೆ ಸಂಪತ್ತಿನಲ್ಲಿ ಓಲಾಡುತ್ತಿರುವ ರಾಯರಿಗೆ ಬೇಸರವೆ ?

ಬೇಸರವೇಕೆ ? ವಿರಕ್ತಿಯೇ ಬಂದು ಬಿಟ್ಟಿತ್ತು—ಸಂಜೆ ಹೊತ್ತು ಮನೆ ಮುಂದೆ ಅಡ್ಡಾಡುತ್ತಿದ್ದ ರಾಯರಿಗೆ. ಕಾರಣ ಅಡಿಗೆ ಮನೆಯಿಂದ ಘಂ ಎಂದು ಹೊರ ಹೊಮ್ಮುತ್ತಿದ್ದ ಸಂಜೆ ಅಡಿಗೆಯ ಪರಿಮಳ—ಆಹಾ ! ಆ ದಿವ್ಯ ವಾಸನೆಯಿಂದಲೇ ರಾಯರು ಅಡಿಗೆಯೇನೆಂದು ಕರೆಕ್ಟಾಗಿ ಹೇಳಬಲ್ಲರು. ಬಟಾಣಿ ಬೇಳೆ ಹುಳಿ, ಬದನೆಕಾಯಿ ಎಣ್ಣೆಗಾಯಿ, ಆಲೂಗಡ್ಡೆ ಉಪ್ಪೇರಿ, ಟೊಮೇಟೋ ಸಾರು ! ಪಾಪ, ಮೃಷ್ಟಾನ್ನದ ಘಮ್ಮಲು ರಾಯರನ್ನು ಆಕ್ರಮಿಸಿ, ಅವರ ಮೂಗಿನ ಹೊಳ್ಳೆಗಳನ್ನು ಅರಳಿಸಿದಾಗ, ಅವರ salivary glands ಜೋಗದ ಜಲಪಾತವಾಗುತ್ತಿದ್ದವು.

ಛಿ ! ಛಿ ! ಇದೇನು ಬರಡು ಜೀವನ ! ಇದೇನು ಹಣ ! ಇಷ್ಟ ಬಂದದನ್ನು ತಿನ್ನೋ ಹಾಗಿಲ್ಲ. ಖಾರ ಕೂಡದು, ಸಿಹಿ, ಸ್ವಪ್ನದಲ್ಲಿ ಮಾತ್ರ, ಉಪ್ಪು...... ಊಹೂಂ ! ಸಪ್ಪೆ ಊಟ ತಿಂದು ಜೀವನವೇ ಸಪ್ಪೆಯಾಗಿತ್ತು ರಾಯರಿಗೆ.

25 ವರ್ಷಗಳ ಹಿಂದೆ, ಚಾಮರಾಜಪೇಟೆಯ ಗಲ್ಲಿಯಲ್ಲಿ ಜಂಟಿ ವಠಾರದ ಒಂಟಿ ಮನೆಯಲ್ಲಿ, ದಂಟಿನ ಸೊಪ್ಪಿನ ತಂಬುಳಿಯನ್ನು ಅನುಭವಿಸಿ ತಿಂದ ಜ್ಞಾಪಕ ಬಂತು. ಯಾವುದೋ ಅಂಗಡಿಯಲ್ಲಿ ಗುಮಾಸ್ತೆ, ಬಡತನ, ಬವಣೆ. ಆದರೆ ಕಷ್ಟಪಟ್ಟರೇನು, ಕಲ್ಲನ್ನು ಕಚ್ಚಿ ತಿಂದು ಅರಗಿಸಿಕೊಳ್ಳೋ ಕೆಚ್ಚೆದೆಯಿತ್ತು. ತಿಪ್ಪೆಯ ಮೇಲೆ ಕೂತುಕೊಂಡೇ ಉಪ್ಪರಿಗೆ ಕನಸು ಕಾಣುತ್ತಾ ಇದ್ದರು. ಚಪ್ಪಲಿ ಇಲ್ಲದೆಯೇ ಚಾಮರಾಜಪೇಟೆಯ ಚಪ್ಪಡಿಗಳನ್ನು ಸವೆಸಿದ್ದರು. ಜತೆಯಲ್ಲಿ ಬಳ್ಳಿಯಂತೆ ಬಳುಕು

ತ್ತಿದ್ದ ಬಂಗಾರದಂಥ ಭಾರ್ಯೆ ಭಾಗ್ಯಲಕ್ಷ್ಮಿ—(ರಾಯರ ಸಂಪತ್ತು ಹೆಚ್ಚಿದಂತೆಲ್ಲ direct ratio ದಲ್ಲಿ ಅವಳ ತೂಕವೂ ಹೆಚ್ಚುತ್ತಾ ಹೋಗಿ ಹಂಸಗಮನೆಯಾಗಿದ್ದ ಭಾಗ್ಯಲಕ್ಷ್ಮಿ ಈಗ ಗಜಗಮನೆಯಾಗಿರುವುದು ಬೇರೆ ವಿಷಯ !)

ಆಗ ಹಣ ಇಲ್ಲದಿದ್ದರೂ ಹುಮ್ಮಸ್ಸಿತ್ತಲ್ಲ—ವ್ಯಾಪ್ಯಾನ್ನ ಇರಲಿಲ್ಲ—ದಿನಾ ಮೆಣಸಿನ ಸಾರಿತ್ತು. ತಬ್ಬಲಿ ದೇವರಿಗೆ ತಂಬಿಟ್ಟೇ ನೈವೇದ್ಯ !

ರಾಯರಿಗೆ ಹೆಂಡತಿ ಮಾಡುತ್ತಿದ್ದ ಸಾರಿನ ನೆನಪಾಯಿತು. ಬಾಯಲ್ಲಿ ನೀರೂರಿತು. ಅದೇನು ಇಂಗಿನ ವಾಸನೆ ! ಗಂಗೆಯಾದರೇನು, ತುಂಗೆಯಾದರೇನು, ಇಂಗು ಹಾಕಿದರೇ ಸಾರು ಚೆನ್ನ ! ಈಗ ರಾಯರ ಪಾಲಿಗೆ ಬರೀ ಬೇಳೆ ಕಟ್ಟಿನ ಸಾರು.

ಪೇಟೇಲಿದ್ದ "ಬಾಂಬೆ ಸ್ವೀಟ್ ಮಾರ್ಟ್" ಮುಂದೆ ತಾನೂ, ಲಕ್ಷ್ಮಿಯೂ ನಿಂತು, ಸಾಲು ಸಾಲಾಗಿ ಪೇರಿಸಿಟ್ಟಿದ್ದ ತಿಂಡಿಗಳನ್ನ ಆಸೆಯಿಂದ ನೋಡುತ್ತಿದ್ದ ನೆನಪಾಯಿತು ರಾಯರಿಗೆ. ಆಸೆಯಿದ್ದರೆ ಏನಾಯಿತು ? ಆಲಕ್ಕೆ ಹೂವಿಲ್ಲ, ಆಸೆಗೆ ಕೊನೆಯಿಲ್ಲ. ಶಂಕರ ಸುಬ್ಬು ಕೃಷ್ಣನ ಜೇಬಿನಲ್ಲಿ ದುಡ್ಡೇ ಇಲ್ಲ. ಕೊನೆಗೆ ಎರಡು ಗ್ಲಾಸು ಪಾನಕ ಕುಡಿದು, ನಾಯಿ ಸಮುದ್ರ ಹೊಕ್ಕರೂ ಅದಕ್ಕೆ ನೆಕ್ಕು ನೀರೇ— ಅಂತ ತೆಪ್ಪಗೆ ಮನೆಗೆ ಬರುತ್ತಿದ್ದರು.

ಹಾಗೇ ಅದೇ ಅಂಗಡಿಯ partner ಆಗಿ, ಅದೃಷ್ಟ ಲಕ್ಷ್ಮಿ ರಾಯರಿಗೆ ಒಲಿದು, ಈಗ ಬೆಂಗಳೂರಿನಲ್ಲಿ ಹತ್ತಾರು departmental stores, ನಾಲ್ಕಾರು ಥಿಯೇಟರುಗಳು — ಆದರೆ ಎಂಥಾ ವಿಪರ್ಯಾಸ ! ರಾಯರ prestige ಉ Society ಯಲ್ಲಿ ಹೆಚ್ಚುತ್ತಾ ಹೋದಂತೆ, prestige ರೋಗ ಗಳೆಲ್ಲ ಅವರನ್ನು ಅಟ್ಟಿಕೊಂಡೇ ಬಂದುಬಿಟ್ಟುವು ; ಮೆಟ್ಟಿಕೊಂಡು ಬಿಟ್ಟುವು.

ಬಾಂಬೆ ಹಲ್ವ ತಿನ್ನೋಕೆ ಆಗದಿದ್ರೆ ಏನು—ಇದ್ದದ್ದ ಮೆದ್ದು ಬಿಡೋದು, ಇಲ್ಲದ್ದ ಒದ್ದು ಬಿಡೋದು—ಅಂತ ಬೆಲ್ಲದ ಚೂರೇ ತಿನ್ನುತ್ತಿದ್ದ ರಾಯರಿಗೆ ಈಗ ಡಯಾಬಿಟಿಸ್. ಮೆಣಸಿನ ಸಾರು ಮನಸ್ಸಿನಲ್ಲಿ ಮಾತ್ರ—ರಾಯರಿಗೆ ulcer. ಉಪ್ಪು ವರ್ಜ್ಯ—ರಾಯರಿಗೆ, ಬ್ಲಡ್ ಪ್ರೆಷರ್, ಡ್ರಾಯಿಂಗ್ ರೂಮಿನಲ್ಲಿಗೇಣಗಲದ U-foam sofa set ; ಅಕಟಾ, ರಾಯರಿಗೆ spondylitis—dunlop ಸೋಂಕ ಕೂಡದು, ಮರದ ಕುರ್ಚಿ ಮೇಲೆ ಕೂಡಬೇಕು. ಗಟ್ಟಿ ಹಾಸಿಗೆ ಮೇಲೇ ಮಲಗಬೇಕು.

ಊಟಕ್ಕೆ ಕೂತಿದ್ದ ರಾಯರಿಗೆ ಬೇಸರವಾಗದೆ ಇದ್ದೀತೆ? ಅವರ ಮುಂದೆಯೂ ಹೊಳೆಯೋ ತಟ್ಟೆ, ಲೋಟ; ಭಟ್ಟರು ಮಾಡಿದ್ದ ಅಡಿಗೆಯನ್ನು ಬಟ್ಲರು ತಂದು ಬಡಿಸ್ತಾ ಇದ್ದ. ರಾಯರಿಗಲ್ಲ—ಪಾಪ. ಅವರ ಹೆಂಡತಿ ಮಕ್ಕಳಿಗೆ, ರಾಯರ ಮುಂದೆ 2 ರೊಟ್ಟಿ, ಬೇಳೆ, ಬೇಯಿಸಿದ ತರಕಾರಿ ಇದ್ದುವು. "ಹಣೇಲಿ ಬರೆದಿದ್ದು ಒರಸಿದರೆ ಹೋಗುತ್ಯೆ?" ಅಂದುಕೊಂಡರು ರಾಯರು. "ಅಯ್ಯೋ ಭಗವಂತ, ಹಲ್ಲು ಇರೋನಿಗೆ ಕಡಲೆ, ಕಡಲೆ ಇರೋನಿಗೆ ಹಲ್ಲು ಕೊಟ್ಟರೆ ನಿನ್ನ ಗಂಟೇನು ಹೋಗುತ್ತಪ್ಪಾ" ಅಂತ ಹಲುಬಿಕೊಂಡು ರೊಟ್ಟಿ ಕಚ್ಚಿದರು. ಪಾಪ, ಆ ಭಗವಂತ ರಾಯರ ಹತ್ತಿರ ಕಡಲೆ ಇದ್ದಾಗ ಹಲ್ಲನ್ನಂತೂ ಕೊಟ್ಟಿರಲಿಲ್ಲ. ಈಗ ಹಲ್ಲಿದ್ದಾಗ ಹುಲ್ಲು ಕೊಟ್ಟುಬಿಟ್ಟಿದ್ದ,



ಇಂಜಿನಿಯರಿಂಗ್ ಯಾಕ್ಲಾ ಮಗ, ವಸಿ ಬ್ಯಾಂಕ್ ಯಾಪಾರ ಕಲಿ.
ಮಿಕ್ಕೋರ್ಗೆ ಸಾಲ ಕೊಡ್ಸಿ ಮನೆ ಕಟ್ಕೊಳ್ಳವಂತೆ !"

ಟ್ಯಾಕ್ಸ್, ಟ್ಯಾಕ್ಸ್ !

ಕೊಂಕಣಿ ಮೂಲ : ಸಿಜ್ಯೆಸ್ ತಾಕೊಡೆ

ಕನ್ನಡಕ್ಕೆ : 'ಆನಂದಾಗರ', ಕಿನ್ನಿಗೋಳಿ

ಕಾನೂನು ಕುರುಡು ಅನ್ನುತ್ತಾರೆ. ಕೆಲವು ಸಾರಿ ಕಾನೂನು ಅಂಧ ಮಾತ್ರವಲ್ಲ ಕಿವುಡು, ಮೂಕ, ಬೆಪ್ಪ, ಕುಂಟು ಮತ್ತು ನಗ್ನವೂ ಆಗಿರುತ್ತದೆ. ಭಾರತದಂತಹ ಪ್ರಜಾ(ಮಜಾ)ಪ್ರಭುತ್ವ ದೇಶದಲ್ಲಿ ಪ್ರಭಾವ, ಧನ, ಮೈಯಲ್ಲಿ ಖಾದಿಯುಡುಪು ಮತ್ತು ತಲೆಯಲ್ಲಿ ಗಾಂಧಿ ಟೋಪಿಯಿದ್ದರೆ ಕಾನೂನಿನ ಬಿರುಕಿನಿಂದ ಪುಸ್ಕಂತ ನುಸುಳಬಹುದು—ಶ್ಯಾವಿಗೆ ಮಣೆಯಿಂದ ಶ್ಯಾವಿಗೆ ಜಾರಿದಂತೆ.

ಆದರೆ ಅರಬ್ಬೀ ದೇಶಗಳಲ್ಲಿ ಬಿಗುವಾದ ಕಾನೂನು. ಅರ್ಬಿಗಳ ರಾಷ್ಟ್ರಗಳಲ್ಲಿ ಪರ್ಬುಗಳ ಬೇಳೆ ಬೇಯೋಲ್ಲ. ಇಸ್ಲಾಮಿಕ್ ಕಾನೂನು ವರ್ತುಲವೆಂದರೆ ಮರಣ ಪಂಜರ ವ ಇಲಿಬೋನಿನಂತೆ !

ಇಂತಹ ಕಾನೂನುಗಳಿದ್ದ ನಾಡಿನಲ್ಲಿ 'ನಶಾ ಔರ್ ತಮಾಶಾ' ಸಂಗತಿಗಳಲ್ಲಿ ಸಿಕ್ಕಹಾಕ್ಕೊಂಡರೆ ಆ ಬಡಪಾಯಿಯ ಹನ್ನೆರಡು ಬ್ರೇಸ್ತವಾರ, ಹದಿಮೂರು ಶುಕ್ರವಾರ ಮತ್ತು ಹದಿನಾಲ್ಕು ಶನಿವಾರಗಳಾದಂತೆ. ಕಾನೂನು ರಚಿಸಿದವರಿಗೆ ಅದು ಅನ್ವಯಿಸುವುದು ವಿರಳ—ನಮ್ಮ ವೇದಿಕೆಯ ಮೇಲಣ ಧರ್ಮೋಪದೇಶದಂತೆ. ಪರರಿಗೆ ಮಾತ್ರ ಖಂಡಿತ ಅನ್ವಯಿಸುತ್ತದೆ. ರೋಮಿನಲ್ಲಿರುವಾಗ ರೋಮನರಂತೆ ಬಾಳಬೇಕು—ಎಂಬಂತೆ ಅರಬ್ಬೀ ನಾಡಿನಲ್ಲಿರುವಾಗ ಅವರ ಕಾಯಿದೆಗಳಿಗೆ ತಲೆಬಾಗಿ ವರ್ತಿಸಬೇಕು. ಅವರ ನಾಡಿನಲ್ಲಿ ಅವರ ರಾಮರಾಜ್ಯ. ಬೇರೆಯವರಿಗೆ ಯಮರಾಜ್ಯ.

ಕೊಲ್ಲಿ ರಾಷ್ಟ್ರಗಳಲ್ಲಿ ದುಡಿಯುವವರಿಗೆ ಶುಕ್ರವಾರ ರಜಾ—ಮಜಾದ ದಿನ. ಸ್ವಂತೂರಿನಲ್ಲಿ ಭಾನುವಾರ ಭಕ್ತಿಯಿಂದ ಪಾಲಿಸಿದಂತೆ ಗಲ್ಫಿನಲ್ಲಿ ಗುರುವಾರ--ಶುಕ್ರವಾರ ಅಮಲಿನಲ್ಲಿ ತಳ್ಳಲು ಪ್ರಯತ್ನಿಸುತ್ತಾರೆ. ಅವತ್ತು ಯಾರೋ ರಮ್ಮಿ ಆಡೋದು, ಯಾರೋ ರಮ್ ಗುಟುಕರಿಸೋದು. ಯಾರೋ ಕೋರ್ಟ್, ಟ್ವೆಂಟಿ ಏಟ್ಸ್ ಅಂತ ಇಸ್ಪೀಟಿನ ಸ್ಪಿರಿಟಿಗೆ ಮಾರುಹೋಗುತ್ತಾರೆ ಮತ್ತೆ ಯಾರೋ ಡಾರ್ಟ್ಸ್, ಡೊಮಿನೋಸ್, ಕ್ರಿಕೆಟ್, ಜಾಗಿಂಗ್ ಅಂತ ಕಾಯಾತ್ಮಗಳನ್ನು ಸಂತಸಪಡಿಸುತ್ತಾರೆ. ದೇವಮಂದಿರಗಳನ್ನು ಹುಡುಕೋದು ಇದೆ.

ವೀಕ್‌–ಎಂಡ್ ಎಂದರೆ ಅರಬ್ಬೀಯರು ತಂತಮ್ಮ ಹುಡದಿ ಮಕ್ಕಳೊಡನೆ ಕಾರುಗಳಲ್ಲಿ ದೂರದ ಅರಣ್ಯಕ್ಕೆ ಅಥವಾ ಕಡಲತಡಿಗೆ ಹೋಗಿ ತಂಬು ಹಾಕುತ್ತಾರೆ. ಕೆಲವರು ಪಿಕ್ನಿಕ್ ಇಡುತ್ತಾರೆ. ಕೆಲವರು ಗಾಳ ಹಾಕಲು ಧಾವಿಸುತ್ತಾರೆ. ಕೆಲವರಿಗೆ ಶುಕ್ರವಾರದಂದು ಸ್ಪೆಶಲ್ ಭೋಜನ—ಮಟನ್ ಅಥವಾ ಚಿಕನ್ ಬಿರಿಯಾನಿ, ಪ್ರಾನ್ ಫ್ರ್ಯಾಯ್, ಪಾಂಪ್ಲಾ ಮಸಾಲಾ ಇತ್ಯಾದಿ. ಕೆಲವರು ಕಲಸಿಟ್ಟ ವಾಯ್ನ್ ಸೇವಿಸಿ ಹೋಟಲುಗಳಲ್ಲಿ ಊಟ ಮಾಡುತ್ತಾರೆ. ಶುಕ್ರವಾರ ಮನೆಯಲ್ಲಿ ಅಥವಾ ರೂಮುಗಳಲ್ಲಿ ಬಿಲ್ಕುಲ್ ಬೆಂಕಿ ಹತ್ತಿಸುವುದಿಲ್ಲ. ಕೆಲವರು ಗುರುವಾರ ವೀಡಿಯೊ ದಲ್ಲಿ ಹಿಂದಿ ಚಿತ್ರ ಕಂಡು ಮಲಗಿದವರು ಶುಕ್ರವಾರ ಮುಂಜಾನೆ ಹತ್ತು ಗಂಟೆಗೆ ಎದ್ದು ಫಲಾಹಾರ ಮುಗಿಸಿ ಪುನಃ ನಿದ್ರಿಸಿದವರು ಸಂಜೆ ನಾಲ್ಕು ಗಂಟೆಗೆದ್ದು ಕುಂಭ ಕರ್ಣನನ್ನೂ ನಾಚಿಕೆಗೀಡು ಮಾಡುತ್ತಾರೆ !

ಕೆಲವು ಕೊಲ್ಲಿ ರಾಷ್ಟ್ರಗಳಲ್ಲಿ ನಮ್ಮ ದೇಶದವರ ಕ್ಲಬ್‌ಗಳಿವೆ. ಕೊಂಕಣಿ ಕ್ಲಬ್, ಕೆನರಾ ಕ್ಲಬ್, ಕರ್ನಾಟಕ ಕ್ಲಬ್, ಮಂಗ್ಳೂರು ಕ್ಲಬ್, ಬೊಂಬೇ ಕ್ಲಬ್, ಕುಷ್ಟೆಲಾ ಕ್ಲಬ್, ಬಾಟ್ಲಿಬೊಯ್ಸ್ ಇ.ಇ. ಕ್ಲಬ್ಬುಗಳಿದ್ದಂತೆ ಯಾವುದೋ ದೇಶ ದಲ್ಲಿ ನಮ್ಮ ಜನಸಾಮಾನ್ಯರ 'ಕಂಟ್ರಿ ಕ್ಲಬ್' ಇದೆ.

ಈ ಕಂಟ್ರಿ ಕ್ಲಬ್ಬಿನಲ್ಲಿ ಇಡೀ ಭಾರತದ ಅವಿವಾಹಿತ ಅಂತರ್ಸೋಬಗಿನವರಿಗೆ, ಅಖಂಡ ಬ್ರಹ್ಮಚಾರಿಗಳಿಗೆ, ತಾತ್ಕಾಲಿಕ ಬ್ರಹ್ಮಚಾರಿಗಳಿಗೆ, ಸದಾಚಾರಿಗಳಿಗೆ ಹಾಗೇ ವಿವಾಹಿತ–ಬ್ರಹ್ಮಚಾರಿಗಳಿಗೆ ಪ್ರವೇಶ. ಯಾರೋ ಅಪರೂಪಕ್ಕೆ ಮಾಂಸ ತರು ತ್ತಿದ್ದ, ಬಾಟಲಿ ತಯಾರು ಮಾಡುತ್ತಿದ್ದ ಮತ್ತು ಗೌರವ ಸದಸ್ಯರನ್ನು ಆಹ್ವಾನಿಸು ತ್ತಿದ್ದ !

ಈ ಸದಸ್ಯರು ಹೆಚ್ಚಾಗಿ ಶುಕ್ರವಾರದಂದು ಜಮಾಯಿಸುತ್ತಿದ್ದರು. ಆವಾಗ ಯಾರೋ ಸೊಂಗುರ್ಲಾ ಮೀನು ತರುವನು, ಯಾರೊಬ್ಬ ಪ್ರಾನ್ ಕರಿಯುತ್ತಿದ್ದ, ಯಾರೊಬ್ಬ ಏಡಿ ಫ್ರ್ಯಾ ಮಾಡುತ್ತಿರುವನು ಮತ್ತು ಯಾರೊಬ್ಬ ಪೆಪ್ಸಿ ಇಲ್ಲವೆ ಸೆವೆನ್–ಅಪ್ ಹಂಚಿ ಹಾಜರಿದ್ದವರ ಶ್ವಾಸಕೋಶಗಳನ್ನು ತೇವಗೊಳಿಸುತ್ತಿದ್ದ.

ಡಿಸೆಂಬರ್ ಮಾಸ. ಹಿಮಋತು ಆರಂಭವಾಗಿತ್ತು. ಆ ವೇಳೆ ಏಕಾಂಗಿ ಕಂಬಳಿಯು ಆಶ್ರಯು ತೊರೆದರೆ, ಹೊಸದಾಗಿ ಲಗ್ನವಾದ ವರ ವಧುವಿನ ಕಾವು ಬಯಸುತ್ತಿದ್ದ— ಹುಂಜ ಹೇಂಟೆಯು ಸನ್ನಿಧಾನಕ್ಕೆ ಧಾವಂತ ಪಟ್ಟಂತೆ !

ದಿನ ಶುಕ್ರವಾರ. ಆ ದಿವಸವೂ ನಾವೆಲ್ಲ 'ಏಕಜೀವ ಸದಾಶಿವ' ಧೋರಣೆಯು ಮಿತ್ರಮಂಡಲಿ ಒಗ್ಗೂಡುವದು. ಕಾರ್ಡ್ಸ್ ಆಡೋದು, ದೀಪಕನ ಚಾ ಕುಡಿ

ಯೋದು, ನೊರೆಯಿಲ್ಲದ ಪ್ರಾನ್ ಕಬಳಿಸೋದು ಮತ್ತು ವಿಸ್ಕಿಯ ಬೇಳೆ ಸಾರು ಅನ್ನ ಭಕ್ಷಿಸಿ ಸ್ವಸ್ಥ ನಿದ್ರಾದೇವಿಯ ಆಲಿಂಗನದಲ್ಲಿ ಅರೇಬಿಯನ್ ನೈಟ್ಸ್ ಕಾಣುವ ದೆಂಬ ಯೋಜನೆಯನ್ನು ರೂಪಿತಗೊಳಿಸಿದ್ದೆವು.

ಎಂದಿನಂತೆ ಒಬ್ಬೊಬ್ಬರೇ 'ಸಲಾಮ್ ಆಲೆಕುಮ್' ಅನುತ ಒಳಹೊಕ್ಕರು. ಆದರೆ ಯಾವಾಗಲೂ ಬಂದು 'ಕಿತೆ ಕಿತೆ' ಮಾಡಿ, ತಾನೂ ನಕ್ಕು ಬೇರೆಯವರನ್ನು ನಗಿಸುತ್ತಿದ್ದ ಕುಂಪಾರಿ (ಮಹಾಶಯ) ಮಾತ್ರ ನಾಪತ್ತೆ. ನಾವು ಕಾದೆವು. ಕಾಯುತ್ತ ಕಾಯುತ್ತ ಒಣಗಿ ಹೋದೆವು. ಒಣಗಿ ಒಣಗಿ ಸುಸ್ತಾದೆವು! ಸುಸ್ತಾಗಿ ಸುಸ್ತಾಗಿ ಹಣ್ಣಾದೆವು !!

ಕೊನೇ ಗಳಿಗೆ ಊಟದ ಪಂಕ್ತಿ ಹಾಕುವುದೆನ್ನುವಾಗ ನಮ್ಮ ಜನರಲ್ ಮಹಾನುಭಾವ ತೇಕುತ್ತ ತೇಕುತ್ತ 'ಓ ಅಲ್ಲಾಹ್ !' ಎಂದು ಒಳಗೆ ನುಗ್ಗೇಬಿಟ್ಟ— ಸೌತೆಕಾಯಿ ತೋಟದಲ್ಲಿ ಹಂದಿ ನುಗ್ಗಿದಂತೆ! ಆತ ಪೂರ್ತಿ ಬೆವೆತಿದ್ದ. ಕೂದಲು ಕೆದರಿತ್ತು. ಕಣ್ಣುಗಳು ಪುನರೆಹುಳಿಹಣ್ಣಿನಂತೆ ಕೆಂಪಗಾಗಿದ್ದುವು. ಮೂಗು ಉಬ್ಬಿ ಕೊಂಡಿತ್ತು—ಗಂಡು ಮಾರ್ಜಾಲದಂತೆ. ತುಟಿಗಳು ಬಿಚ್ಚಿಕೊಂಡಿದ್ದುವು—ವಧುವಿ ನಂತೆ.

ಏನಾದರೂ ವಿಶೇಷ ನಡೆದಿರಬೇಕೆಂದು ಆತ ಅವಸ್ಥೆ ಕಂಡಾಗ ಖಚಿತವಾಗು ತ್ತಿತ್ತು.

"ಭಾರೀ ಲಫ್ಡ ಆಯ್ತು ಮಹರಾಯ" ಅಂದ ನಮ್ಮ ಮಿತ್ರ—ಲಿಜ್ಜತ್ ಹಪ್ಪಳ ಕಡಿಯುತ್ತ "ಒಳಗೆ ಬೀಳುವವನು ಬದುಕಿದ !"

"ದೇವರೇ ಕಾಪಾಡಪ್ಪ !" ನಾವೂ ಆತುರಭರಿತರಾದೆವು.

ಅವನು ವಿಚಿತ್ರ ಆದರೂ ನಿಜ ಘಟನೆಯನ್ನು ಹೇಳಲಾರಂಭಿಸಿದ !

"ಬೆಳಿಗ್ಗೆ ಪಿರಿಪಿರಿ ಮಳೆ ಸುರಿಯುತ್ತಿತ್ತು. ನಾನು ಗಡ್ಡ ಗೀರಿ ಸ್ನಾನ ಮಾಡಿ ನಾಷ್ಟ ಮುಗಿಸಿ ಹೊರಗಡೆ ಗೇಟಿನ ಹತ್ತಿರ ಟ್ಯಾಕ್ಸಿಗಾಗಿ ಕಾದುಕೊಂಡಿದ್ದೆ.

"ಅಷ್ಟರಲ್ಲಿ ಒಬ್ಬ ಪಠಾಣ ಟ್ಯಾಕ್ಸಿ ನಿಲ್ಲಿಸಿದ. ನಾನು ಒಳ ನುಗ್ಗಿದೆ. ಮುಂದು ಗಡೆಯ ಸೀಟಿನಲ್ಲಿ ಕೂತೆ. ಟ್ಯಾಕ್ಸಿ ಹೊರಟಿತು.

"ಎಂಬೆಸಿ ಪೊಲೀಸ್..." ಸ್ತ್ರೀಯೋರ್ವಳ ಸ್ವರ ಕೇಳಿಸಿತು ನನಗೆ. ಹಿಂದಿರುಗಿ ನೋಡಿದೆ. ಒಬ್ಬ ಹೈದರಾಬಾದಿ ನಾರಿ ಹಿಂದಿನ ಸೀಟಿನಲ್ಲಿ ಕೂತಿದ್ದಳು. ಟ್ಯಾಕ್ಸಿ ಡ್ರೈವರ್ ಆಕೆ ಕಥೆ ಹೇಳಲು ಶುರುಮಾಡಿದ.

ಅವಳಿಗೆ ಕಳೆದ ಹತ್ತು ತಿಂಗಳುಗಳಿಂದ ಸಂಬಳ ಕೊಟ್ಟಿಲ್ಲವಂತೆ. ಅವಳ ಹರಾಮಿ ಧನಿಗಳು ಅವಳನ್ನು ಹೊಡೆದುಬಡಿದು ಉಪವಾಸ ಹಾಕುತ್ತಾರಂತೆ. ನಿನ್ನೆ ರಾತ್ರಿಯೂ ಸಹಾ ಆ ರೂಕ್ಷ ಅರಬ್ಬೀ ಧಣಿ ಆಕೆಯನ್ನು ಹೊಡೆದು ಹದಮಾಡಿದ ರಂತೆ. ಈ ಗುಲಾಮಗಿರಿ ಸಹಿಸಲಾಗದೆ ಇವತ್ತು ಮುಂಜಾವ ಬಚ್ಚಲು ಮನೆಗೆಂದು ಹೋದವಳು ಅಲ್ಲಿಂದ ಕಣ್ತಪ್ಪಿಸಿ ಸೀದಾ ಓಡಿ ಬಂದಿದ್ದಾಳೆ. ಈಗ ಇಂಡಿಯನ್ ಎಂಬೆಸಿಗೆ ಹೋಗುತ್ತಾಳಂತೆ......" ಪಠಾಣ ಗಿಯರ್ ಬದಲಾಯಿಸಿದ.

"ಇವತ್ತು ಎಂಬೆಸಿ ಬಂದ್" ಅಂದೆ ನಾನು.

"ಹಾಗಾದ್ರೆ ಆಕೆಯನ್ನು ಪೊಲೀಸ್ ಸ್ಟೇಶನಿನಲ್ಲಿ ಬಿಡುತ್ತೇನೆ" ಎಂದ ಪಠಾಣ.

"ಸಿಗ್ನಲ್ ಹತ್ರ ಟ್ಯಾಕ್ಸಿ ನಿಂತಿತ್ತು. ಅಷ್ಟರಲ್ಲಿ ಹಿಂದಿನಿಂದ ರಭಸವಾಗಿ ಬಂದ ಒಂದು ಬಿಳಿ ಕಾರು ನಮ್ಮ ಟ್ಯಾಕ್ಸಿಗೆ ಅಡ್ಡ ನಿಂತಿತು. ಅದರಿಂದ ಇಬ್ಬರು ಅರಬ್ಬೀ ಹೆಂಗಳೆಯರು ದರದರಾಂತ ಇಳಿದರು. ಊರಿನ ಮಾದಿಗರಾದರೂ ಸುಂದರವಾಗಿ ದ್ದಾರೆ. ಆದರೆ ಈ ಗೊಮ್ಮಟ ವರ್ಣದ ಕಪ್ಪು ಕಪ್ಪು ಕಾಳೀದೇವಿಯರು ಹಲ್ಕಿರಿದು ಮತ್ತು ನಿತಂಬ ಆಲ್ಲಾಡಿಸಿ ಸೀದಾ ನಮ್ಮ ಟ್ಯಾಕ್ಸಿ ಇದ್ದಲ್ಲಿಗೆ ಬಂದು,

"ಹೇಯ್ ನಮ್ಮ ಹುಡುಗಿಯನ್ನು ಕರಕೊಂಡು ಎಲ್ಲಿಗೆ ಓಡೋಗ್ತಿಯಾ ?" ಎಂದು ನನ್ನ ಶರ್ಟಿನ ಕಾಲರನ್ನು ಜಗ್ಗಿ ಪ್ರಶ್ನಿಸಿದಳು.

"ಇಲ್ಲ, ನಾನೂ ಒಬ್ಬ ಪ್ರಯಾಣಿಕ. ಆ ಹೆಂಗಸು ಮೊದಲೇ ಈ ಟ್ಯಾಕ್ಸಿ ಯಲ್ಲಿ ಕೂತಿದ್ದಳು. ಆಕೆಯನ್ನು ನಾನರಿಯೆ. ನನಗೆ ಮತ್ತು ಅವಳಿಗೆ ಯಾವ ಸಂಬಂಧವೂ ಇಲ್ಲ." ನಾನು ಕರಿಯಳಿಗೆ ಸಮಜಾಯಿಸಲು ಯತ್ನಿಸಿದೆ.

"ಡ್ರ್ಯೈವರ್ ಪಠಾಣನೂ ಸತ್ಯಸಂಗತಿ ಹೇಳಿದ—ಅಲ್ಲಾನ ಹೆಸರಿನಲ್ಲಿ. ಆದರೆ ಆ ಕರಿಯರು ಕೇಳಲಿಲ್ಲ. ಬದಲಿಗೆ ಬಲೆಯಲ್ಲಿನ ಹಸಿಸೌದೆಯಂತೆ ಮುರುಗುಟ್ಟಿ ದರು. ತದಾನಂತರ ನನ್ನನ್ನು ಮತ್ತೆ ಆ ಹೈದರಾಬಾದಿ ಹೆಂಗಸನ್ನು ಹಿಡಿದೆಳೆದು ಕೊಂಡು ಹೋಗಿ ಅವರ ಕಾರಿನಲ್ಲಿ ದಬ್ಬಿದರು. ಪಠಾಣ ಬಡಪಾಯಿ ಕೈಭಾಷೆ ಯಿಂದಲೇ ಕಾರಿನ ಬಾಡಿಗೆ ಕೇಳುತ್ತಲೇ ಹಿಂಗಾಲಿನಿಂದಲೇ ಪರಾರಿಯಾದ !

"ಪೊಲೀಸ್ ಸ್ಟೇಶನ್ ತಲಪಿದ್ದೇ ತಡ ಆ ಕರಿಯುರು ಅರಬ್ಬೀ ಭಾಷೆಯಲ್ಲಿ ಸಿಡಿದಳು—ಸಳಸಳವೆನ್ನುವ ತೈಲದಲ್ಲಿ ಬೆಳ್ಳುಳ್ಳಿ ಪುಟಿದಂತೆ !

"ಹೈದರಾಬಾದಿ ಹೆಂಗಸನ್ನು ಒಬ್ಬ ಪೊಲೀಸ್ ಒಳಕೋಣೆಗೆ ಕರೆದೊಯ್ದ.

ಹೊರಗಡೆ ನನ್ನ ತನಿಖೆ ಪ್ರಾರಂಭವಾಯಿತು.

"ಗೊತ್ತಿದೆಯೋ ನಿನಗೆ ?" ವಿಚಾರಿಸಿದ ಒಬ್ಬ ಯುವಂಗಂಟ ಯೆಮಾನಿ ಪೊಲೀಸ್. "ಸ್ತ್ರೀಯ ಜತೆ ಅಡ್ಡಾಡಿದರೆ ಈ ದೇಶದಲ್ಲಿ ಆರು ತಿಂಗಳು ಒಳಗೆ ತಳ್ಳುತ್ತೇವೆ ಮತ್ತು ವಾರವಾರಕ್ಕೆ ಚಾಟಿಯಿಂದ ಏಟು ಬಾರಿಸುತ್ತೇವೆ—ಕುದುರೆಯನ್ನು ಬಾರಿಸಿದಂತೆ ?"

"ನನಗೆ ಆ ಹೆಂಗಸಿನ ಗುರುತೇ ಇಲ್ಲ. ಅವಳ ಮನೆಯೂ ಗೊತ್ತಿಲ್ಲ" ನಾನು ವಿನಮ್ರನಾಗಿ ಉತ್ತರ ಕೊಟ್ಟೆ.

"ಚುಪ್ ! ಮೇಲಿಂದು ಸುಳ್ಳು ಹೇಳ್ತಿಯಾ ?"

ಅಷ್ಟರಲ್ಲಿ ಒಬ್ಬ ಹಿಂದಿ ಪೊಲೀಸ್‌ನವನು ಬಂದ. "ಇನ್ನು ಮುಂದೆ ಆ ಸ್ತ್ರೀಯ ಮನೆಗೆ ಹೋಗಬೇಡಪ್ಪ" ನನಗೆ ಹಿತ ನುಡಿದ.

"ಇಲ್ಲ ಸ್ವಾಮಿ, ನನಗೆ ಅವಳ ಪರಿಚಯವೇ ಇಲ್ಲ".

"ನೀನು ದಿನಾಲೂ ಅವರ ಮನೆಗೆ ಹೋಗುತ್ತಿಯಂತೆ. ಆ ಅರಬ್ಬೀ ನಾರಿಯರು ನಿನ್ನ ಮೇಲೆ ಆರೋಪ ಹೊರಿಸಿದ್ದಾರೆ."

ನನ್ನ ಶರೀರದಿಂದ ತಣ್ಣಗೆ ಬೆವರಿಳಿಯಿತು.

ಆ ಮೇಲೆ ಅವರು ನನ್ನ ಸ್ಪೋನ್ಸರ(sponsor)ರ ಹೆಸರು, ವಿಳಾಸ, ಟೆಲಿಫೋನ್ ನಂಬ್ರ ಇತ್ಯಾದಿ ಬರೆದುಕೊಂಡು ನನಗೆ ಎಚ್ಚರಿಕೆ ನೀಡಿ ಬಿಟ್ಟರು.

ನಮ್ಮ ಸ್ನೇಹಿತ ದೀರ್ಘ ನಿಟ್ಟುಸಿರು ಬಿಟ್ಟ !

ಇನ್ನು ಮುಂದೆ ಟ್ಯಾಕ್ಸಿಯಲ್ಲಿ ಹೋಗುವುದೆ ಅಲ್ಲ. ಮತ್ತು ಹೋದರೂ ಹಿಂದಿನ ಸೀಟಿನಲ್ಲಿ ಯಾರಾದರೂ ಹೆಂಗಸು ಕುಂತಿದ್ದಾಳೋ ಎಂದು ಮೊದಲು ಪರೀಕ್ಷಿಸುವುದು ಅಗತ್ಯ—ಹೀಗೆ ನಮಗನಿಸಿತು.

ಶುಭಾಶಯಗಳೊಂದಿಗೆ

ಶೃಂಗಾರ್ ಇಲೆಕ್ಟ್ರಿಕಲ್ಸ್


ಇಲೆಕ್ಟ್ರಿಕಲ್ ಇಂಜಿನಿಯರ್ಸ್ ಹಾಗೂ ಪ್ರಥಮ ದರ್ಜೆಯ ಕಂಟ್ರಾಕ್ಟರ್ಸ್
ತುಮಕೂರು ರಸ್ತೆ, ಪೀಣ್ಯ
ಬೆಂಗಳೂರು–560058

ದೂರವಾಣಿ : 385449
350984

ಶುಭಾಶಯಗಳೊಂದಿಗೆ

ಟೆಕ್ನೊಲಿಂಕ್ ಎಂಟರ್‌ಪ್ರೈಸಸ್

35, 5ನೇ ಕ್ರಾಸ್, 1ನೇ ಮೇನ್, ಎಸ್. ಕೆ. ಗಾರ್ಡನ್
ಬೆನ್‌ಸನ್ ಟೌನ್, ಬೆಂಗಳೂರು-560046



ಶುಭಾಶಯಗಳೊಂದಿಗೆ

ಎಕ್ಸಲ್ ಟೂಲ್ಸ್ ಎಂಡ್ ಇಂಜಿನೀಯರಿಂಗ್ ಎಂಟರ್‌ಪ್ರೈಸಸ್

ಬಿ-20, 1ನೇ ಕ್ರಾಸ್, 1ನೇ ಸ್ಟೇಜ್, ಪೀಣ್ಯ ಇಂಡಸ್ಟ್ರಿಯಲ್ ಎಸ್ಟೇಟ್
ಬೆಂಗಳೂರು–560058



REGISTERED No. BGW-180

Printed by V. R. NATH for the Publisher M. SHIVA KUMAR. Published and owned by M. SHIVA KUMAR, 36, 6th Main Road, Malleswarm, Bangalore-560 003. Printed at IMPRESSIONS, 404, Sampige Road, Malleswaram, Bangalore-560 003. Eiditor : M. SHIVA KUMAR.